

# ಸರ್ವಮೂಲ ಸಂದೇಶ

ನ ಹ್ಯಾಜ್ಞಯಾ ವಾಸುದೇವಸ್ಯ ಕಿಂಚಿತ್ ।
ಪಾಪಂ ಭವೇತ್ ಸರ್ವವಿಧರ್ಮಿಣೋಽಪಿ ॥

(ಮ.ಭಾ.ತಾ.ನಿ. 32–109)

ಭಗವಂತನ ಆದೇಶ ಸಮ್ಮತಿ ಇತ್ತೆಂದರೆ ಸಜ್ಜನರು ಅಧರ್ಮವನ್ನೆಸಗಿದರೂ ಅದು ಪಾಪಪ್ರದವೆನಿಸುವುದಿಲ್ಲ.

–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು

ಸಂಪುಟ–೭ ಸಂಚಿಕೆ–೫ ಸರ್ವಧಾರಿ ಸಂ.॥ ಚೈತ್ರ–ವೈಶಾಖ ಮೇ ೨೦೦೮

ಸಂಸ್ಥಾಪಕರು:
ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು

ಶ್ರೀವಿದ್ಯಾಮಾನ್ಯ ಪ್ರಕಾಶನ
ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಅಂತರ್ಜಾಲ ವಿಳಾಸ:
**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| ಉದ್ಧವಗೀತೆ | ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| ವಿದ್ವತ್ ಪ್ರಪಂಚ | ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು | 2 |
| ವಿದುರ ನೀತಿ | ಶ್ರೀ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು | 5 |
| ತೈತ್ತಿರೀಯೋಪನಿಷತ್ | ವಿ॥ ಬನ್ನಂಜೆ ಗೋವಿಂದಾಚಾರ್ಯ | 8 |
| ಮುಖಪುಟ ಲೇಖನ | ವಿ॥ ಎನ್. ಶ್ರೀನಿವಾಸಭಟ್ಟ | 9 |
| ಭಾರತಭಾವದರ್ಪಣ | ವಿ॥ ರಾಮವಿಟ್ಠಲಚಾರ್ಯ | 10 |
| ಹರಿಭಕ್ತಿಸಾರ | ವಿ॥ ಹಯವದನ ಪುರಾಣಿಕರು | 13 |
| ಉಪನಿಷತ್ ಸಂದೇಶ | ಡಾ॥ ಎನ್. ವೆಂಕಟೇಶಾಚಾರ್ಯ | 16 |
| ಸಾಧನೆಗೊಂದು ಮೆರುಗು | ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ | 18 |
| ಯೋನಿ ಶಬ್ದದ ಬಳಕೆಯ ಔಚಿತ್ಯ | | 23 |
| ನಾರಾಯಣ ವರ್ಮ | ವಿ॥ ಬೆ.ನಾ ವಿಜಯೀಂದ್ರಾಚಾರ್ಯ | 25 |
| ವಿದ್ಯೆ | ವಿ॥ ತಿರುಮಲ ಕುಲಕರ್ಣಿ | 28 |
| ಜೀವನಯಜ್ಞ | ಸುನಂದಕೀ | 31 |
| ಪುಷ್ಪಯಾಗದಿಂದ ಮೆರಗು ಪಡೆದ ಹನುಮಜ್ಜಯಂತಿ | | 35 |
| ಮಹಾವಿಷ್ಣುವಿನ ಪ್ರತಿಷ್ಠೆಯಿಂದ ಪುನಃ ವಿಜೃಂಭಿಸಿದ “ಏಕವಾಟ” | | 36 |
| ನೆನಪಿನ ಅಂಗಳ | ವಿ॥ ಶಂಕರನಾರಾಯಣಭಟ್ಟ | 37 |


**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಲಹಾ ಮಂಡಳಿ:**
ವಿಬಲರಾಮ ಭಟ್ಟ, ಉಡುಪಿ
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಗಿರೀಶ ಉಪಾಧ್ಯಾಯ, ಉಡುಪಿ

**ಅಕ್ಷರ ವಿನ್ಯಾಸ ಮತ್ತು ಜೋಡಣೆ:** ಶ್ರೀಮತಿ ಸ್ವಾತಿ ಭಾಗವತ್

**ಬಿಡಿಸಂಚಿಕೆ** : ರೂ. 8.00  **ವಾರ್ಷಿಕಚಂದಾ** : ರೂ. 90.00
**15 ವರ್ಷಕ್ಕೆ** : ರೂ. 1,250.00  **ಸದಸ್ಯರು** : ರೂ. 2,250.00
**ಪೋಷಕರು** : ರೂ. 3,000.00

# ಉದ್ಧವಗೀತೆ



–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು

**ತ್ವಂ ಹಿ ನಃ ಪೃಚ್ಛತಾಂ ಬ್ರಹ್ಮನ್ನಾತ್ಮನ್ಯಾನಂದಕಾರಣಂ।**
**ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ॥**

ಭಗವಂತ ತನ್ನ ಅಂತರಂಗ ಭಕ್ತನಾದ ಉದ್ಧವನಿಗೆ ಉಪದೇಶ ಮಾಡುತ್ತಾ ತನ್ನ ಮೂಲ ಪುರುಷನಾದ ಯದು ಮಹಾರಾಜರು ಜ್ಞಾನವನ್ನು ಪಡೆದ ಬಗೆಯನ್ನು ವಿವರಿಸುತ್ತಾನೆ. ಯದು ಅವಧೂತರಿಂದ ಜ್ಞಾನ ಪಡೆದುದ್ದು. ಅವಧೂತರಿಗೆ ಯಾವುದೂ ಬೇಡ. ಎಲ್ಲವನ್ನು ಮೆಟ್ಟಿ ನಿಂತವರು. ಯಾವುದನ್ನೂ ಮುಟ್ಟದವರು. ಅವರನ್ನು ಮಾತನಾಡಿಸುವುದೇ ಕಷ್ಟ. ಎಲ್ಲಿಯೋ ತನ್ಮಯರಾದ ಅವಧೂತರನ್ನು ತನ್ನ ಕಡೆಗೆ ಸೆಳೆಯುವುದಕೋಸ್ಕರ ಯದು ರಾಜರು ಸಂಬೋಧಿಸುತ್ತಾರೆ "ಬ್ರಹ್ಮನ್" ಎಂದರೆ ಪೂಜ್ಯರಾದವರೇ! ಎಂಬ ಅರ್ಥಕ್ಕೆ ಮಾತ್ರ ಸೀಮಿತವಾದ ಶಬ್ದ ಬ್ರಹ್ಮನ್ ಎಂಬುದು ಅಲ್ಲ. ಆ ಪೂಜ್ಯತೆ ಬರಲು ಬೇಕಾದ ಅರ್ಹತೆಯನ್ನು ವಿವರಿಸುವ ಶಬ್ದವಿದು. ಬ್ರಹ್ಮ ಅಂದರೆ ಪೂರ್ಣ ಎಂದರ್ಥ. ಪೂರ್ಣರಾದವರೆ ಎಂದು ಅರ್ಥ. ಪೂಜೆ ಯಾರಿಗೆ? ಯಾರು ಪೂಜ್ಯರು? ಅಪರಿಪೂರ್ಣರಾದವರಿಗೆ ಎಂದೂ ಪೂಜೆ ಸಲ್ಲದು. ಪೂರ್ಣರಾದವರು ತಾನೆ ಪೂಜೆಗೆ ಅರ್ಹರು. ಅವಧೂತರು ಪೂರ್ಣರಾದವರು. ಹಾಗಾಗಿ ಅವರಿಗೆ ಪೂಜೆ ಯೋಗ್ಯ. ಮತ್ತೆ ಪುನಃ ಪ್ರಶ್ನೆ, ಅವಧೂತರು ಪೂರ್ಣರು ಯಾಕೆ? ಈ ಪ್ರಶ್ನೆಗೂ ಉತ್ತರ "ಬ್ರಹ್ಮನ್". ಸಕಲ ದೇಶಗಳಲ್ಲಿ, ಸಕಲ ಕಾಲಗಳಲ್ಲಿ, ಸಕಲ ಗುಣಗಳಿಂದ ಪೂರ್ಣನಾದವನು ದೇವರು. ಪೂರ್ಣಮಿದಂ ಪೂರ್ಣಮದಃ.......ಎಂಬ ಶ್ರುತಿ ಭಗವಂತನಲ್ಲೇ ಪೂರ್ಣತೆಯನ್ನು ದೃಢಪಡಿಸುತ್ತದೆ. ಪರಿಪೂರ್ಣನಾದ ಈ ಭಗವಂತನನ್ನು ಹೊತ್ತ ಈ ಅವಧೂತನು ಖಂಡಿತವಾಗಿಯೂ ಕೂಡ ಪೂರ್ಣ. ಹೀಗಾಗಿ ಅವಧೂತರು ಯದುವನ್ನು ಪೂರ್ಣನಾದ ಬ್ರಹ್ಮ ಎಂದು ಸಂಬೋಧಿಸುತ್ತಾ ತನ್ನ ಕಡೆಗೆ ತಿರುಗಿಸಿ ತನ್ನ ಪ್ರಶ್ನೆಯನ್ನು ವಿವರಿಸುತ್ತಾ ಇದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶ ನಾವು ಯಾರಲ್ಲಿ ಅಧ್ಯಯನ ಮಾಡುತ್ತೇವೆ. ಅವರಲ್ಲಿ ಬ್ರಹ್ಮನನ್ನು ಚಿಂತಿಸಬೇಕು. ಅದರ ಅರ್ಥ ಗುರುವೇ ಬ್ರಹ್ಮ ಎಂದು ಅಲ್ಲ. "ಆಚಾರ್ಯ ದೇವೋಭವ" ಎಂಬ ತೈತ್ತರೀಯಉಪನಿಷತ್ತು ಅಧ್ಯಾತ್ಮದ ಸಂಪತ್ತನ್ನು ಉಪದೇಶಿಸುವ ಆಚಾರ್ಯರಲ್ಲಿ ದೇವರನ್ನು ಚಿಂತಿಸಿ ಅಧ್ಯಯನ ಮಾಡಿದರೆ ನಮ್ಮ ಅಧ್ಯಯನ ಪೂರ್ಣವಾಗುತ್ತದೆ ಎಂಬ ಸಂದೇಶ ನೀಡುತ್ತದೆ. ★

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ





# ಶ್ರೀಮಧ್ವಮತದ ವೈಶಿಷ್ಟ್ಯಗಳು



–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

## 7) ಸಸ್ವರೂಪದ ಪರಿಚಯ

ಮಧ್ವಮತವನ್ನು ಪ್ರಚುರಪಡಿಸಿರುವ ಶ್ರೀಮಧ್ವಾಚಾರ್ಯರು ಬಳಿತ್ಥಾಸೂಕ್ತ, ಯಜುಃಸಂಹಿತೆ ಇತ್ಯಾದಿ ಪ್ರಮಾಣಗಳಿಂದ ಹಾಗೂ ತಮ್ಮ ಅನುಭವದಿಂದ ತಾವು ದೇವೋತ್ತಮರಾದ ವಾಯುದೇವರ ಅವತಾರ ಎಂಬುದಾಗಿ ತಮ್ಮ ಸ್ವರೂಪವನ್ನು ಪರಿಚಯಿಸಿ ಕೊಟ್ಟಿರುವರು. ಇದರಿಂದಾಗಿ ಅವರಲ್ಲಿ ಮಹತ್ತ್ವಬುದ್ಧಿ ಬರುವಂತಾಗಿದೆ. ಅಲ್ಲದೆ, ಅವರ ಮಾತುಗಳಲ್ಲಿ ವಿಶ್ವಾಸ ಮೂಡುವಂತಾಗಿದೆ.

ಶಂಕರಾಚಾರ್ಯರಾಗಲೀ, ರಾಮಾನುಜಾಚಾರ್ಯರಾಗಲೀ ತಮ್ಮ ಸ್ವರೂಪದ ಪರಿಚಯವನ್ನು ನೀಡಿಲ್ಲ. ತಮ್ಮ ಸ್ವರೂಪದ ಪರಿಚಯವೇ ಇಲ್ಲದ ಅವರಿಗೆ ಪರಬ್ರಹ್ಮನ ಸ್ವರೂಪದ ಪರಿಚಯ ಇದೆ ಎಂದು ನಂಬುವುದಾದರೂ ಹೇಗೆ?

## 8) ಧ್ಯಾನ ಸುಖಕ್ಕೆ ಅವಕಾಶ

**'ಯಾ ನಿರ್ವೃತಿಸ್ತನುಭೃತಾಂ ತವ ಪಾದಪದ್ಮಧ್ಯಾನಾದ್ ಭವಜ್ಜನಕಥಾಶ್ರವಣೇನ ವಾ ಸ್ಯಾತ್ । ಸಾ ಬ್ರಹ್ಮಣಿ ಸ್ವಮಹಿಮ್ನ್ಯಪಿ ನಾಥ ಮಾ ಭೂತ್....'** ಎಂದು (ಭಾಗ–4–9–10) ಭಕ್ತ ಧ್ರುವನು ಭಗವಂತನ ಧ್ಯಾನದಿಂದ ಉಂಟಾಗುವ ಸುಖ ಪರಮಸುಖವೆಂದು ನಿರೂಪಿಸಿರುವನು. ಭಗವದ್ಗೀತೆಯಲ್ಲೂ ಧ್ಯಾನವನ್ನು ಪರಮಾರ್ಶಿಸಿ, **'ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ'** (6–22) ಎಂಬುದಾಗಿ ಧ್ಯಾನದ ಲಾಭವು ಸರ್ವಶ್ರೇಷ್ಠವಾದುದೆಂದು ತಿಳಿಸಲಾಗಿದೆ. ಹೀಗೆ ಸರ್ವಶ್ರೇಷ್ಠವೆಂದು ಪರಿಗಣಿಸಲಾದ ಧ್ಯಾನದ ಸುಖಕ್ಕೆ ಮಧ್ವಮತದಲ್ಲಷ್ಟೇ ಅವಕಾಶವಿರುವುದು. ಬ್ರಹ್ಮನು ನಿರ್ಗುಣ, ನಿರಾಕಾರ ಎನ್ನುವ ಅದ್ವೈತಮತದ ಪ್ರಕಾರ ಅವನಲ್ಲಿ ಭಕ್ತಿಭಾವ ಬರದ ಪ್ರಯುಕ್ತ ಅವನಲ್ಲಿ ಧ್ಯಾನವೂ ಉಂಟಾಗದು. ಭಗವಂತನ ಗುಣ, ಕ್ರಿಯೆ, ಶರೀರ,

ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

ಅವಯವಾದಿಗಳು ಅವನ ಸ್ವರೂಪಾತ್ಮಕಗಳೇ ಆಗಿವೆ. ಆದರೆ ರಾಮಾನುಜಮತದಲ್ಲಿ ಭಗವಂತನ ಗುಣಾದಿಗಳು ಅವನಿಗಿಂತ ಭಿನ್ನವಾದುವುಗಳೆಂದು ಒಪ್ಪಲಾಗಿದೆ. ಹೀಗೆ ಭಿನ್ನ ಗುಣಾದಿಗಳನ್ನು ಹೊಂದಿರುವವನೆಂದು ಭಗವಂತನನ್ನು ಧ್ಯಾನಿಸಿದಲ್ಲಿ ಅಂತಹ ಧ್ಯಾನವು ಅನರ್ಥಕಾರಿ ಎನಿಸುವುದು. **'ಯತ್ಕಿಂಚನ್ಯಥಾ ಸಂಸ್ಥಮನ್ಯಥಾ ಧ್ಯಾತಮಂಜಸಾ । ಧ್ಯಾತುರ್ಮಹಾದೋಷಕರಂ ಕಿಮು ಸರ್ವೇಶ್ವರೋ ಹರಿಃ'**– ಯಾವುದೇ ವಸ್ತು ಒಂದು ರೀತಿಯಾಗಿದ್ದು ಮತ್ತೊಂದು ರೀತಿಯಾಗಿ ಧ್ಯಾನಿಸಲ್ಪಟ್ಟಿತೆಂದರೆ ಹಾಗೆ ಧ್ಯಾನಿಸುವವನಿಗೆ ದೋಷವನ್ನುಂಟುಮಾಡುವುದು. ಹೀಗಿರುವಾಗ ಸರ್ವೇಶ್ವರನಾದ ಭಗವಂತನನ್ನು ಅವನ ನಿಜರೂಪಕ್ಕಿಂತ ವ್ಯತ್ಯಸ್ತವಾಗಿ ಧ್ಯಾನಿಸಿದಾಗ ಮಹಾದೋಷ ಬರುವುದೆಂಬುದು ಸುತರಾಂ ಸಿದ್ಧವಾದುದು ಎಂಬ ಪ್ರಮಾಣವು ಅನ್ಯಥಾಧ್ಯಾನ ನಡೆಸಬಾರದೆಂದು ಎಚ್ಚರಿಸಿದೆ.

## 9) ಏಕಾದಶೀ ವ್ರತದ ಮಹತ್ತ್ವ

ವ್ರತಗಳೆಲ್ಲಲ್ಲ ಏಕಾದಶೀ ವ್ರತಕ್ಕೆ ಅತಿ ಮಹತ್ತ್ವದ ಸ್ಥಾನವಿದೆ. ಇದನ್ನು ಚೆನ್ನಾಗಿ ಪ್ರತಿಪಾದಿಸಿದವರು ಶ್ರೀ ಮಧ್ವಾಚಾರ್ಯರು. ಅವರು ತಮ್ಮ ಕೃಷ್ಣಾಮೃತಮಹಾರ್ಣವ ಎಂಬ ಕೃತಿಯಲ್ಲಿ ಏಕಾದಶೀ ವ್ರತದ ಬಗ್ಗೆ ಬೇರೆ ಬೇರೆ ಪುರಾಣಾದಿಗಳಲ್ಲಿ ಬಂದ ಪ್ರಮಾಣಗಳನ್ನೆಲ್ಲ ಸಂಗ್ರಹಿಸಿ, ಏಕಾದಶೀ ವ್ರತದ ಮಹತ್ತ್ವದ ಬಗ್ಗೆ, ಅದರ ಅನುಷ್ಠಾನಾದಿಗಳ ಬಗ್ಗೆ ಸಾಕಷ್ಟು ವಿವರಣೆಯನ್ನು ನೀಡಿರುವರು.

ಇತರ ಮತಗಳಲ್ಲಿ ಏಕಾದಶೀ ವ್ರತಕ್ಕೆ ಇಷ್ಟು ಪ್ರಾಶಸ್ತ್ಯವನ್ನೂ ನೀಡಲಾಗಿಲ್ಲ. ಅವರು ಅದನ್ನು ಒಂದು 'ಕಾಮ್ಯವ್ರತ' ಎಂದಷ್ಟೇ ಪರಿಗಣಿಸಿರುವರು. ಆದುದರಿಂದಲೇ ಏಕಾದಶಿಯಂದು ಶ್ರಾದ್ಧಾದಿಗಳನ್ನು ಅವರು ಆಚರಿಸುವರು.

ಆರ್ಥಿಕ ದೃಷ್ಟಿಯಿಂದಲೂ ಲಾಭದಾಯಕವೆನಿಸುವ ಏಕಾದಶೀ ವ್ರತದ ಪ್ರಚಾರವು ದೇಶದಲ್ಲಿ ವ್ಯಾಪಕವಾಗಿ ನಡೆಯಿತೆಂದರೆ ಉಳಿತಾಯದ ದೃಷ್ಟಿಯಿಂದಲೂ ಗಮನಾರ್ಹ ಕೊಡುಗೆ ಸಂದಂತಾಗುವುದು.

## 10) ಗೀತೆಗೆ ಅನುಗುಣ್ಯ

ಭಗವದ್ಗೀತೆ ಸರ್ವಮಾನ್ಯವಾದ ಗ್ರಂಥ ತಾನೇ? ಇಂತಹ ಭಗವದ್ಗೀತೆಗೆ ಸರ್ವಾತ್ಮನಾ ಅನುಗುಣವಾದದ್ದು ಶ್ರೀಮಧ್ವಮತ. ಭಗವದ್ಗೀತೆಯ ಯಾವ ಒಂದು

ಆತನನ್ನು ನಂಬಿ ಕೆಟ್ಟವರಿಲ್ಲ.



ಮಾತೂ ಮಧ್ವಮತಕ್ಕೆ ವಿರೋಧಿ ಆಗಿರುವಂತಹದ್ದಿಲ್ಲ.

**'ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರು....' 'ಈಶ್ವರೋಽಹಂ–'** ಮುಂತಾದ ಭಗವದ್ಗೀತೆಯ ಮಾತುಗಳಲ್ಲಿ ಅದ್ವೈತಮತದ ಜಗನ್ಮಿಥ್ಯಾತ್ವನ್ನೂ, ಬ್ರಹ್ಮೈಕ್ಯವನ್ನೂ ನಿಂದಿಸಲಾಗಿದೆ. **'ಮನುಷ್ಯಾಣಾಂ ಸಹಸ್ರೇಷಯ ಕಶ್ಚಿದ್ ಯತತಿ ಸಿದ್ಧಯೇ । ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ–** ಎಂದು ಜೀವರಲ್ಲಿ ಅಸಾಮ್ಯವನ್ನು ಹೇಳುವ ಭಗವದ್ಗೀತೆಯ ಮಾತು ಜೀವರಲ್ಲಿ ಸಮಾನರೆಂದು ವಾದಿಸುವ ರಾಮಾನುಜೀಯ ಮತಕ್ಕೆ ವಿರೋಧಿಯಾದುದು ತಾನೇ! ಹೀಗೆ ಶಂಕರಾಚಾರ್ಯರ, ರಾಮಾನುಜರ ಮತಗಳಿಗೆ ವಿರುದ್ಧಗಳಾದ ಅನೇಕ ಮಾತುಗಳು ಗೀತೆಯಲ್ಲಿ ಬಂದಿವೆ.

ಆದರೆ ಮಧ್ವಮತಕ್ಕೆ ವಿರೋಧಿಯಾದ ಯಾವುದೇ ಮಾತು ಇಲ್ಲದೆ ಇರುವುದರಿಂದ ಮಧ್ವಮತ ಭಗವದ್ಗೀತೆಗೆ ಸಮ್ಮತವಾದ ಮತವೆಂದು ಸಿದ್ಧಿಸುವುದು.

## ಭೂಷಣವೇ ಹೊರತು ದೂಷಣವಲ್ಲ

ಮಧ್ವಮತದ ಮೇಲೆ ಸಾಮಾನ್ಯವಾಗಿ ಆರೋಪಿಸಲಾಗುವ ಒಂದು ದೋಷವೆಂದರೆ ಅದರಲ್ಲಿ ಇತರ ಮತ ಖಂಡನಾ ಪ್ರವೃತ್ತಿ ವಿಶೇಷವಾಗಿದೆ ಎಂಬುದು. ಆದರೆ ಶಾಸ್ತ್ರದಲ್ಲಿ ಪರಮತ ಖಂಡನೆಯು ಸ್ವಮತ ಮಂಡನೆಯಷ್ಟೇ ಪ್ರಾಶಸ್ತ್ಯವನ್ನು ಹೊಂದಿದೆ ಎಂಬುದನ್ನು ಪರಿಶೀಲಿಸದಿರಬಾರದು. ಶ್ರೀವೇದವ್ಯಾಸರು ತಮ್ಮ ಬ್ರಹ್ಮಸೂತ್ರದಲ್ಲಿ 'ಸಮಯಪಾದ'– ಎಂಬ ಒಂದು ಪಾದವನ್ನೇ ಇತರ ಮತಗಳ ಖಂಡನೆಗಾಗಿ ಮೀಸಲಿಟ್ಟಿರುವರು. ಶಂಕರಾಚಾರ್ಯರೂ, ರಾಮಾನುಜಾಚಾರ್ಯರೂ ತಮ್ಮ ಮತಗಳಲ್ಲಿ ಆಗ ಪ್ರಚಲಿತವಿದ್ದ ಬೌದ್ಧಾದಿ ಮತಗಳ ಖಂಡನೆಯನ್ನು ನಡೆಸಿರುವರು.

ಆದುದರಿಂದ ವಿಮರ್ಶೆಯ ದೃಷ್ಟಿಯಿಂದ ಹೊರಟ ಇತರ ಮತ ಖಂಡನೆ ಶಾಸ್ತ್ರ ಪ್ರಪಂಚದಲ್ಲಿ ಭೂಷಣವೇ ಹೊರತು ದೂಷಣವಲ್ಲ.

ಹೀಗೆ ಶ್ರೀಮಧ್ವಮತವು ನಿರ್ದುಷ್ಟವಾಗಿದೆ. ಅನೇಕಾನೇಕ ವೈಶಿಷ್ಟ್ಯಗಳನ್ನೊಳಗೊಂಡಿದೆ. ಸಜ್ಜನರು ಇಂತಹ ಮಧ್ವಮತದಲ್ಲಿ ವಿಶ್ವಾಸವಿಟ್ಟು.. ಅದರ ಅಧ್ಯಯನಾದಿಗಳನ್ನು ನಡೆಸಿ ಉದ್ಧಾರ ಹೊಂದುವಂತಾಗಬೇಕೆಂದು ನಮ್ಮ ಹಾರೈಕೆ. ★

ಇದು ಬರಿಯ ಮಾತಲ್ಲ, ಅನುಭಾವಿಗಳ ಅನುಭವದ ಮಾತು.

# ವಿದುರ ನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರು ಮಠ ಬರಹ: ಕೃಷ್ಣಾ

ವಿದುರ ಮೊದಲು ತನ್ನ ಅಣ್ಣನಿಗೆ ನಿದ್ರೆ ಯಾಕೆ ಬರುವುದಿಲ್ಲವೆಂದು ವಿಚಾರ ಮಾಡತೊಡಗಿದ. ಒಬ್ಬನಿಗೆ ನಿದ್ರೆ ಬಾರದಿರಲಿಕ್ಕೆ ನಾಲ್ಕು ಕಾರಣಗಳಿವೆ.

**ಅಭಿಯುಕ್ತಂ ಬಲವತಾ ದುರ್ಬಲಂ ಹೀನಸಾಧನಂ**
**ಹೃತಸ್ವಂ ಕಾಮಿನಂ ಚೋರಂ ಆವಿಶಂತಿ ಪ್ರಜಾಗರಾಃ ॥**

ನಾಲ್ಕು ರೀತಿಯ ಜನರನ್ನು ಎಚ್ಚರಿಕೆ ಸದಾ ಆವರಿಸಿಕೊಂಡಿರುತ್ತದಂತೆ. ಒಬ್ಬ ಹೃತಸ್ವಂ. ಒಮ್ಮೆ ಭಾರಿ ಶ್ರೀಮಂತನಾಗಿದ್ದು ನಂತರ ಯಾರ ಸಂಪತ್ತೆಲ್ಲ ದೋಚಿ ಹೋಗಿದೆಯೋ, ಅಂತಹ ವ್ಯಕ್ತಿಯು ಮನೆಯಲ್ಲಿ ಕೂತು ತಾನು ಅನುಭವಿಸಿದ ವೈಭವವನ್ನು ಮೆಲಕು ಹಾಕುತ್ತಿರುತ್ತಾನೆ, ನಿದ್ದೆ ಮಾಡುವುದಿಲ್ಲ. ಅಪಾರ ಸಂಪತ್ತೆಲ್ಲಾ ದೋಚಿ ಹೋಗಿರುವ ಆ ವ್ಯಕ್ತಿಗೆ ಜೀವನದಲ್ಲಿ ನಿದ್ದೆ ಬರುವುದಿಲ್ಲ. ಇನ್ನೊಬ್ಬ ಕಾಮುಕ ವಯಸ್ಸಿಗೆ ಬಂದಿದ್ದಾನೆ, ಹದಿನೆಂಟು ವರ್ಷ ದಾಟಿದೆ, ಐವತ್ತು ವರ್ಷ ತುಂಬಿಲ್ಲ. ಇಂತಹ ವ್ಯಕ್ತಿ ತನ್ನ ಜೀವನದಲ್ಲಿ ಇರುವಾಗ ವಿಪರೀತ ಚಿಂತನೆ ಮಾಡುತ್ತಾ, ಮನಸ್ಸಿನಲ್ಲಿ ಬಂದ ವಿಷಯಗಳೆಲ್ಲಾ ತನಗೆ ಬೇಕೆಂದು ಚಡಪಡಿಸುತ್ತಾನೆ. ಇವನನ್ನು ಕಾಮುಕನೆಂದು ಕರೆಯುತ್ತಾರೆ. ಇವನೂ ಕೂಡ ರಾತ್ರಿ ಚಾಪೆಯಲ್ಲಿ ನಿದ್ದೆ ಮಾಡುವುದಿಲ್ಲ, ಹೊರಳಾಡಿಕೊಂಡು ಏನೇನೋ ಅಲೋಚನೆ ಮಾಡಿಕೊಂಡಿರುತ್ತಾರೆ. ಮತ್ತೊಬ್ಬ ಚೋರ–ಕಳ್ಳ. ಅವನು ರಾತ್ರಿಯಲ್ಲಿ ಕೆಲಸ ಮಾಡುವವ. ಆದ್ದರಿಂದ ಅವನು ರಾತ್ರಿ ನಿದ್ದೆ ಮಾಡುವುದಿಲ್ಲ. ಇನ್ನು, ಒಬ್ಬ ಸಂಪತ್ತನ್ನು ದೋಚಿದ್ದಾನೆ, ದರೋಡೆ ಮಾಡಿದ್ದಾನೆ. ಯಾರ ಸಂಪತ್ತನ್ನು ಇವನು ದೋಚಿದ್ದಾನೋ ಅವರು ತನಗಿಂತ ಬಲಿಷ್ಠರು ಎಂಬ ಪ್ರಜ್ಞೆ ಇದೆ. ತನಗಿಂತ ಬಲಿಷ್ಠರಾದ ಅವರು ಯಾವ ಸಮಯದಲ್ಲೂ ಬಂದು ತನಗೆ ಬಡಿಯುತ್ತಾರೋ ಎಂಬ ಭಯದಿಂದ ನಿದ್ರೆ ಮಾಡುವುದಿಲ್ಲ. ಹಾಗಾದರೆ ಬಲಿಷ್ಠರ ಸಂಪತ್ತನ್ನು ದರೋಡೆ ಮಾಡಿದವನಿಗೆ, ಕಳ್ಳನಿಗೆ, ಕಾಮುಕನಿಗೆ ಮತ್ತು ತನ್ನ ಸಂಪತ್ತೆಲ್ಲಾ

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**



ಸೂರೆ ಹೋದವನಿಗೆ ನಿದ್ದೆ ಬರುವುದಿಲ್ಲ. ಈ ನಾಲ್ಕು ಅವಸ್ಥೆಗಳಲ್ಲಿ ನಿದ್ದೆ ಬರುವುದಿಲ್ಲ. ತನ್ನ ಅಣ್ಣ ಈ ನಾಲ್ಕರಲ್ಲಿ ಯಾವ ಅವಸ್ಥೆಗೊಳಗಾಗಿದ್ದಾನೆ ಎಂದು ವಿದುರ ಅಲೋಚಿಸಿದನು. ತನ್ನ ಅಣ್ಣ ಕಳ್ಳನಲ್ಲ, ವಯಸ್ಸು ಎಪ್ಪತ್ತು ದಾಟಿದುದರಿಂದ ಕಾಮುಕನಾಗಲಾರ. ಅವನ ಸಂಪತ್ತು ಸೂರೆಹೋಗಿಲ್ಲ. ಇರುವ ನಾಲ್ಕು ಕಾರಣದಲ್ಲಿ ಮೂರು ಕಾರಣ ಕೂಡುವುದಿಲ್ಲ. ಇನ್ನು ಉಳಿದ ಒಂದೇ ಕಾರಣವೆಂದರೆ ಅವನು ಅವನಿಗಿಂತ ಬಲಿಷ್ಠರ ವಿರುದ್ಧ ಕಟ್ಟಿಕೊಂಡು ಅವರ ಸಂಪತ್ತು ದೋಚಿದ್ದಾನೆ. ಆದ್ದರಿಂದ ಅವನಿಗೆ ನಿದ್ದೆ ಬರುವುದಿಲ್ಲ. ಅಂದರೆ ಧೃತರಾಷ್ಟ್ರನಕ್ಕಿಂತ ಬಲಿಷ್ಠನಾದ ಭೀಮಸೇನನ ಸಂಪತ್ತನ್ನು ದೋಚಿ, ಭೀಮಸೇನನ ವಿರೋಧ ಕಟ್ಟಿಕೊಂಡಿದ್ದಾನೆ. ಆದ್ದರಿಂದ ಅಣ್ಣನಿಗೆ ನಿದ್ದೆ ಬರಲಿಕ್ಕೆ ಹೇಗೆ ಸಾಧ್ಯ? ನಿದ್ದೆ ಬರಬೇಕಾದರೆ ದೋಚಿದ ಸಂಪತ್ತನ್ನು ತಿರುಗಿ ಅವರಿಗೆ ಕೊಟ್ಟು ತಪ್ಪಾಯಿತೆಂದು ಕ್ಷಮೆ ಕೇಳಿದಲ್ಲಿ ರಾತ್ರಿ ನಿದ್ದೆ ಮಾಡಬಹುದು ಎಂದು ವಿದುರ ಹೇಳಿದನು. ಭೀಮಸೇನನ ವಿರೋಧ ಕಟ್ಟಿಕೊಂಡು ಅವನ ಸಂಪತ್ತನ್ನು ದೋಚಿದವನೆಂದು ನೇರ ಆಕ್ರಮಣ ಮಾಡಿದ ವಿದುರನಿಗೆ, ಧೃತರಾಷ್ಟ್ರನು, ಅದನ್ನು ನಿನ್ನಲ್ಲಿ ಉಪದೇಶ ಕೇಳಲಿಲ್ಲ. ನಾಲ್ಕು ವೇದಾಂತದ ಮಾತುಗಳನ್ನು ಸಾಧ್ಯವಾದರೆ ಹೇಳು. ಇಲ್ಲವಾದರೆ ಹೊರಟು ಹೋಗು ಎಂದ. ಮೊದಲು ನಿದ್ರಾಹೀನತೆಯ ಕಾರಣಗಳನ್ನು ಹೇಳುವುದರ ಮೂಲಕ ವಿದುರನು ಧೃತರಾಷ್ಟ್ರನನ್ನು ಸಿದ್ಧಗೊಳಿಸಿ ಮುಂದುವರಿಸತೊಡಗಿದನು.

ನಿನಗೆ ನಿದ್ದೆ ಬರಬೇಕಾದರೆ ಮೊದಲು ನಿನ್ನ ಮನೆಯಿಂದ ನಾಲ್ಕು ಜನರನ್ನು ಹೊರಗೆ ಕಳಿಸು. ದುರ್ಯೋಧನ, ದುಶ್ಯಾಸನ, ಶಕುನಿ, ಕರ್ಣ, ಈ ನಾಲ್ವರ ಕೈಯಲ್ಲಿ ರಾಜ್ಯವನ್ನು ಕೊಟ್ಟು ನಾವು ಕ್ಷೇಮದಿಂದ ಇರಬೇಕೆಂದು ಅಪೇಕ್ಷೆಪಟ್ಟರೆ ಸಾಧ್ಯವಾಗದು. ದುರ್ಯೋಧನನು ಎಂಥವನು. ಇನ್ನೊಬ್ಬರ ಸಂಪತ್ತಿನ ಮೇಲೆಯೇ ದೃಷ್ಟಿ ಹಾಕಿದವನು. ದುಶ್ಯಾಸನನಂತು ಇನ್ನೊಬ್ಬ ಹೆಣ್ಣು ಮಗಳ ಮೇಲೆ ಆಸೆಪಡುವವ. ಕರ್ಣನು ಮತ್ಸರಿ, ಶಕುನಿಯು ಕುಹಕಿ. ಇಂತಹ ಕುಹಕಿ, ಮತ್ಸರಿ, ಸ್ತ್ರೀಲಂಪಟ, ಇನ್ನೊಬ್ಬರ ಸಂಪತ್ತನ್ನು ದೋಚುವ ಅಪೇಕ್ಷೆ ಉಳ್ಳವರನ್ನು 'ದುಷ್ಟ ಚತುಷ್ಟಯ' ಎಂದು ಕರೆದರು. ಈ ನಾಲ್ಕು ಜನ ದುಷ್ಟರನ್ನು ಬಗಲಲ್ಲಿ ಇಟ್ಟುಕೊಂಡು ಇವರ ಮೂಲಕ ರಾಜ್ಯ ಭಾರ ಮಾಡುವ ರಾಜನಿಗೆ ನೆಮ್ಮದಿ ಇರುವುದಿಲ್ಲ. ರಾಜ್ಯವನ್ನು ಸ್ವಲ್ಪವಾದರೂ ಭಗವತ್‌ಪ್ರಜ್ಞೆ ಇದ್ದವರಲ್ಲಿ, ಯಾರಿಗೆ ಜೀವನಲ್ಲಿ ಸ್ವಲ್ಪವಾದರೂ ಧಾರ್ಮಿಕತನ ಇದೆಯೋ, ಅದರ ಕೈಯಲ್ಲಿ ರಾಜ್ಯವನ್ನು ಕೊಡು. ನೀನು ಮೊದಲು ಅವರ ಕೈಯಿಂದ ರಾಜ್ಯವನ್ನು ತಪ್ಪಿಸಿ

**ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು**

ಧರ್ಮರಾಜ, ಭೀಮಸೇನ, ಅರ್ಜುನರ ಕೈಯಲ್ಲಿ ರಾಜ್ಯ ಕೊಡು ಎಂಬುದರೊಂದಿಗೆ ವಿದುರ ಆರಂಭಿಸಿದನು. ಪಾಂಡವರು ನಿನಗೆ ಅಪಮಾನ ಮಾಡಿದ್ದಾರೆ, ಆದ್ದರಿಂದ ಅವರಿಗೆ ರಾಜ್ಯ ಹೇಗೆ ಕೊಡುವುದು ಎಂದು ಆಲೋಚಿಸಬೇಡ. ಯಾಕೆಂದರೆ ಪಂಡಿತರಾದ ಜನರು ತಾವು ಮಾನಾಪಮಾನಗಳಿಗೆ ಸಮಾನರಾಗಿರುತ್ತಾರೆ. ಪಂಡಿತರ ಲಕ್ಷಣ ಹೇಳುವುದಾದರೆ–ಒಬ್ಬ ಜ್ಞಾನಾರ್ಜನೆ ಮಾಡಿದಾಕ್ಷಣದಿಂದ ಅವನನ್ನು 'ಪಂಡಿತ' ಎಂದು ಕರೆಯುವುದು ಸರಿಯಲ್ಲ. ಸಮಾಜದಲ್ಲಿ ತನ್ನ ಜೀವನ ಕ್ರಮವನ್ನು ಚೆನ್ನಾಗಿ ಅನುಸರಿಸಿಕೊಂಡು ಬರುವವನನ್ನು 'ಪಂಡಿತ' ಎಂದು ಕರೆಯುವರು. 'ಪಂಡಿತ' ಎಂದರೆ ಹೀಗಿರಬೇಕು.

**ಗಾಂಗೋ ಹ್ರದ ಇವಾಕ್ಷೋಭ್ಯಃ ಯ ಸ ಪಂಡಿತ ಉಚ್ಚತೇ॥**

ಗಂಗಾ ಮಡುವಿನಂತೆ ಇರತಕ್ಕ ವ್ಯಕ್ತಿಯನ್ನು 'ಪಂಡಿತ' ಎಂದು ಕರೆದರು. ಗಂಗಾ ಮಡುವಿನಂತೆ ಅಂದರೆ **'ನ ಹೃಷ್ಯತ್ಯಾತ್ಮಸಮ್ಮಾನೇ ನಾವಮಾನ್ಯೇನ ತಪ್ಯತೇ'** ಅವಮಾನ ಆದರೆ ಕುಗ್ಗದೆ, ಸನ್ಮಾನ ಮಾಡಿದರೆ ಹಿಗ್ಗದೆ, ಸಂಪತ್ತು ಬಂದಾಗ ಹಾರಾಡದೆ, ಆಪತ್ತು ಬಂದಾಗ ಪೂರ್ತಿ ಜಗ್ಗಿ ಹೋಗದಿರುವುದೇ ಪಂಡಿತರ ಲಕ್ಷಣ. ಜೀವನದಲ್ಲಿ ವ್ಯಕ್ತಿ ಹೇಗಿರಬೇಕೆಂದರೆ ಗಂಗಾನದಿಯಂತೆ. ತಾನು ಎಲ್ಲಾ ಕಾಲದಲ್ಲಿಯೂ ಒಂದೇ ರೀತಿ ಹರಿದುಕೊಂಡು ಇರಬೇಕು. ಗಂಗಾನದಿಯು ಮಳೆಗಾಲದಲ್ಲಿ ಮಳೆಯ ನೀರಿನಿಂದ ಹರಿದಳು. ವೈಶಾಖದಲ್ಲಿ ಹಿಮಕರಗಿ ಆ ನೀರಿನಿಂದ ಹರಿದಳು. ಹಾಗಾದರೆ ಮಳೆ ನಿಂತರೂ ಗಂಗೆಯ ನೀರು ಕಡಿಮೆ ಆಗುವುದಿಲ್ಲ. ಮಳೆ ಬಂದರೂ ಗಂಗೆಯ ನೀರು ಜಾಸ್ತಿಯಾಗುವುದಿಲ್ಲ. ಗಂಗಾನದಿಯು ಎಂದೂ ಕೂಡ ತನ್ನ ಇತಿಮಿತಿಯನ್ನು ಬಿಟ್ಟು ಹರಿದವಳಲ್ಲ. ಅದೇ ನಮ್ಮ ಮನೆಯ ಮುಂದೆ ಇರುವ ತೋಡಿನ ನೀರು, ಒಂದು ಗಂಟೆಯ ಮಳೆಯಲ್ಲಿ ಉಕ್ಕಿತು, ಮನೆಯ ಒಳಗೆ ಬಂತು. ಸ್ವಲ್ಪ ಮಳೆ ನಿಂತ ನಂತರ ತೋಡು ಪೂರ್ತಿ ಒಣಗಿ ಹೋಯಿತು. ಆದುದರಿಂದ ನಮ್ಮ ಅವಸ್ಥೆ ಮನೆಯ ಮುಂದೆ ಇರುವ ಗಟಾರದಂತೆ ಆಗದೆ ಗಂಗಾನದಿಯಂತೆ ಇರಬೇಕು. ಜೀವನದಲ್ಲಿ ಏರುಪೇರು ಎನ್ನತಕ್ಕಂತದ್ದು ಬರಬಾರದು. ಇಂತವರನ್ನು ಪಂಡಿತ ಎಂದು ಕರೆದರು.

ಗಂಗೆಯಲ್ಲಿ ಹರಿಯುವ ನೀರು ಶುದ್ಧವಾದ ನೀರು. ಹಾಗೆಯೇ ವ್ಯಕ್ತಿಯು ತಾನು ಜೀವನದಲ್ಲಿ, ಸಮಾಜದಲ್ಲಿ ಹರಿದುಕೊಂಡು ಹೋಗುವಾಗ ಶುದ್ಧವಾಗಿ, ಸಾತ್ವಿಕನಾಗಿ ತಾನು ಹರಿದುಕೊಂಡು ಹೋಗಬೇಕು. ಗಂಗೆಯ ನೀರು ಬಿಳಿ

(15ನೇ ಪುಟ ನೋಡಿ....)

ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು.





# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಅಧ್ಯಯನವನ್ನು ಮಾಡಲಿಕ್ಕೆ ಅಪೇಕ್ಷೆ ಪಟ್ಟ ವಿದ್ಯಾರ್ಥಿ ಎರಡು ವಿಷಯಗಳನ್ನು ಕಲಿಯಬೇಕು. ಅಧ್ಯಯನದ ವಿಷಯ ಎರಡು. ಶಬ್ದ–ಅರ್ಥ ದ್ವೆ ಬ್ರಹ್ಮಣೀ ವೇದಿತವ್ಯೇ.... ಎಂದು ಪ್ರಮಾಣ ಇದೆ. ಎರಡು ಬ್ರಹ್ಮಗಳನ್ನು ತಿಳಿದುಕೊಳ್ಳಬೇಕು. ಬ್ರಹ್ಮ ಎಂದರೆ ದೊಡ್ಡದಾದ್ದು, ಅಂತಪಾತ ಇಲ್ಲದ್ದು. ಶಬ್ದವನ್ನು ಹಾಗೂ ಅರ್ಥವನ್ನು ಸಹ ಬ್ರಹ್ಮ ಎಂದು ಕರೆಯುತ್ತಾರೆ. ಸರಿಯಾದ ಶಬ್ದ ಯಾಕೆ ತಿಳಿಯಬೇಕು? ಸರಿಯಾದ ಅರ್ಥ ಯಾಕೆ ಗೊತ್ತಿರಬೇಕು? ಇದಕ್ಕೆ ವೇದದಲ್ಲೇ ಉತ್ತರ ಹೇಳಿದೆ. ಶುದ್ಧವಾದ ಶಬ್ದದಿಂದ ಶುದ್ಧವಾದ ಫಲ ಸಿಗುತ್ತದೆ. ಒಂದು ಶಬ್ದವನ್ನು ಸರಿಯಾಗಿ ತಿಳಿದುಕೊಂಡು ಸರಿಯಾಗಿ ಉಚ್ಚರಿಸಿದರೆ ಅವನನ್ನು ಅದು ಸ್ವರ್ಗಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಿದೆ. ಅದು ಕಾಮಧೇನುವಿನಂತೆ ಬಯಸಿದ ಫಲ ಕೊಡುತ್ತದೆ. ತಪ್ಪಾಗಿ ಉಚ್ಚಾರ ಮಾಡಿದರೆ? ಅದಕ್ಕೂ ವೇದವೇ ಉತ್ತರ ಹೇಳುತ್ತದೆ. (ದುಷ್ಟ ಶಬ್ದ.......) ಶಬ್ದ ಕೇವಲ ಅಕ್ಷರಗಳ ಸಮುದಾಯ ಅಲ್ಲ. ಅದರ ಉಚ್ಚಾರ ಸರಿ ಇರಬೇಕು. ಅದನ್ನು express ಮಾಡುವ ಸ್ವರ ಸಹ ಸರಿಯಾಗಿ ಉಚ್ಚರಿಸಬೇಕು. ತಪ್ಪಾಗಿ ಉಚ್ಚರಿಸಿದರೆ ಸುಳ್ಳೇ ಉಚ್ಚರಿಸಿದಂತಾಗುತ್ತದೆ. ಹೀಗೆ ತಪ್ಪಾಗಿ ಉಚ್ಚರಿಸಿದಾಗ ಅದ ನಮ್ಮ ಪಾಲಿಗೆ ಅದರ ಫಲ ವಜ್ರದಷ್ಟು ಕಠೋರವಾಗುತ್ತದೆ. ಸಿಡಿಲಿನಂತೆ ಭಯಂಕರವಾಗಿರುತ್ತದೆ. ಇದಕ್ಕೆ ವೇದವೇ ಒಂದು ಉದಾಹರಣೆ ಕೊಡುತ್ತದೆ. ಪತಂಜಲಿ ಸಹ ಬೇರೆ ಬೇರೆ ಉದಾಹರಣೆಗಳನ್ನು ಕೊಟ್ಟಿದ್ದಾನೆ. ವೇದದಲ್ಲಿ ಕೊಟ್ಟ ಉದಾಹರಣೆ ಹೀಗಿದೆ. ಒಮ್ಮೆ ತ್ವಷ್ಟೃ ಇಂದ್ರನನ್ನು ಕೊಲ್ಲುವ ಮಗ ಹುಟ್ಟಲಿ ಎಂದು ಯಾಗ ಮಾಡಿದ. ಅದರಲ್ಲಿ ಎಲ್ಲಾ ದೇವತೆಗಳಿಗೆ ಸ್ವಾಹಾ ಎಂದು ಆಹುತಿಯನ್ನು ಕೊಟ್ಟ. ಹಾಗೆಯೇ ಇಂದ್ರನಿಗೆ ಆಗುವಾಗ "ಇಂದ್ರ ಶತ್ರುವೇ ಸ್ವಾಹಾ" ಎಂದು ಆಹುತಿ ಕೊಟ್ಟ. ಅವನು ಉಚ್ಚರಿಸಿದ ಪದಗಳು ಸರಿ ಇದ್ದರೂ ಅದರ ಸ್ವರ ಸರಿಯಾದ ಕ್ರಮದಲ್ಲಿ ಉಚ್ಚರಿಸಲ್ಪಡಲಿಲ್ಲವಾದ್ದರಿಂದ ಇಂದ್ರನನ್ನು ಕೊಲ್ಲುವ ಮಗ ಹುಟ್ಟುವ ಬದಲು ಇಂದ್ರನಿಂದ ಕೊಲ್ಲಲ್ಪಡುವ ಮಗ ಹುಟ್ಟಿದ. ಇಂದ್ರ ಶತ್ರುವನ್ನು ಎರಡು ರೀತಿಯಲ್ಲಿ ಉಚ್ಚಾರ ಮಾಡಬಹುದು. ಮೊದಲಿನ ಮೂರು ಶಬ್ದಗಳನ್ನು ಅನುದಾತ್ತವಾಗಿ ಹೇಳಿ ಕಡೆಯ ಶಬ್ದ ಉದಾತ್ತವಾಗಿ ಹೇಳಬಹುದು. ಅಥವಾ ಮೊದಲಿನ

(24ನೇ ಪುಟ ನೋಡಿ)

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಮುಖಪುಟಲೇಖನ

# ಶ್ರೀ ವೇದವ್ಯಾಸರು

–ಎನ್. ಶ್ರೀನಿವಾಸಭಟ್ಟ ಉಡುಪಿ

**"ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಿತಮ್"** ಎಂಬ ಪ್ರಕಾರ ಜಟಿಲವಾದ ವೇದಾರ್ಥವನ್ನು ತಿಳಿಸಲು ಇತಿಹಾಸ ಪುರಾಣಾದಿಗಳನ್ನು ರಚಿಸಿದ ವೇದವ್ಯಾಸರನ್ನು ಯಃಕಶ್ಚಿತ್ ಮುನಿಯೆಂದು ಕೆಲವರು ಹೇಳುತ್ತಾರೆ. ಆದರೆ ಶ್ರೀಮಧ್ವಾಚಾರ್ಯರು ಪುರಾಣವಾಕ್ಯದ ಉದಾಹರಣೆ ಪೂರ್ವಕವಾಗಿ ವೇದವ್ಯಾಸರು ನಾರಾಯಣನ ಅವತಾರವೆಂದೇ ತಾತ್ಪರ್ಯನಿರ್ಣಯದಲ್ಲಿ ಸಮರ್ಥಿಸಿದ್ದಾರೆ. **"ಕೋಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್"** ಎಂಬುದಾಗಿ ಹೇಳುತ್ತಾ ಮಹಾಭಾರತದಂತಹ ಗ್ರಂಥ ರಚಿಸಲು ಸರ್ವಜ್ಞನಾದ ಭಗವಂತನ ಹೊರತು ಬೇರೆ ಯಾರಿಗೂ ಸಾಧ್ಯವಿಲ್ಲ. ಯಾಕೆಂದರೆ ಮಹಾಭಾರತದಲ್ಲಿ ಏನೇನು ಆಗುತ್ತದೋ ಅದನ್ನೆಲ್ಲ ಮೊದಲೇ ಬರೆದು ಇಡಬೇಕೆಂದರೆ ಭೂತ, ವರ್ತಮಾನ, ಭವಿಷ್ಯತ್ತಿನ ಜ್ಞಾನವಿದ್ದರೆ ಮಾತ್ರ ಸಾಧ್ಯ. ಇಲ್ಲದೇ ಹೋದಲ್ಲಿ ಮಹಾಭಾರತದಲ್ಲಿ ಯಾರು ಏನು ಮಾಡುತ್ತಾರೆ, ಯಾರಲ್ಲಿ ಯಾರು ಏನನ್ನು ಹೇಳುತ್ತಾರೆ, ಮಹಾಭಾರತದ ಹದಿನೆಂಟು ದಿನದ ಯುದ್ಧದಲ್ಲಿ ಯಾರು ಎಷ್ಟನೇ ದಿನದಲ್ಲಿ ಯಾರಿಂದ ಸಾಯುತ್ತಾರೆ ಎಂಬುದನ್ನೆಲ್ಲಾ ಮೊದಲೇ ನಿಖರವಾಗಿ ಬರೆಯಲು ಸಾಧ್ಯವಿಲ್ಲ. ಆದ್ದರಿಂದ ತ್ರಿಕಾಲಜ್ಞಾನಿಯಾದ ಭಗವಂತನಿಗೆ ಮಾತ್ರ ಅದನ್ನು ಬರೆಯಲು ಸಾಧ್ಯ ಎಂದು ಭಗವತ್ಪಾದರು ತಿಳಿಸಿದ್ದಾರೆ. ಆದ್ದರಿಂದ ಮಹಾಭಾರತ ಕರ್ತೃವಾದ ವೇದವ್ಯಾಸರು ಭಗವಂತನ ಅವತಾರವೆಂದೇ ತಿಳಿದು ಅವರನ್ನು ಭಜಿಸಿದರೆ ಉತ್ತಮವೆಂದು ತಿಳಿಸಿದ್ದಾರೆ. ಹಾಗೆಯೇ ಶ್ರೀಮದಾಚಾರ್ಯರು ತಮ್ಮ ತಂತ್ರಸಾರ ಸಂಗ್ರಹದಲ್ಲಿ ಎಲ್ಲ ಮಂತ್ರಗಳನ್ನು ಉಪದೇಶಿಸಿ ಕೊನೆಗೆ **"ವಾಸಿಷ್ಠವೃಷ್ಣಿಪ್ರವರಮಂತ್ರಾಸ್ತತ್ರಾಪಿ ವೀರ್ಯದಾಃ"** ಎಂದು ಹೇಳಿ ವೇದವ್ಯಾಸ ಮಂತ್ರವು ಎಲ್ಲ ಮಂತ್ರಗಳಿಗಿಂತಲೂ

(12ನೇ ಪುಟ ನೋಡಿ)

**ಪ್ರತಿದಿನ ಆತನನ್ನು ಪೂಜಿಸಬೇಕು**





# ಶ್ರೀ ಮಹಾಭಾರತದಲ್ಲೇನಿದೆ?

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ನೈಮಿಶಾರಣ್ಯದಲ್ಲಿ ಕುಲಪತಿಗಳಾದ ಶೌನಕರು ಹನ್ನೆರಡು ವರ್ಷ ಕಾಲದ ದೀರ್ಘಸತ್ರವೊಂದನ್ನು ನಡೆಸುತ್ತಿದ್ದರು. ನಿತ್ಯಕರ್ಮಾನುಷ್ಠಾನದ ಬಳಿಕ ಶೌನಕರಿಂದ ಪ್ರವಚನ ಅಲ್ಲಿಯ ನಿತ್ಯಕಾಯಕ. ಒಮ್ಮೆ ರೋಮಹರ್ಷಣರ ಮಕ್ಕಳಾದ ಉಗ್ರಶ್ರವರು ಅಲ್ಲಿಗೆ ಬಂದರು. ನೆರೆದಿದ್ದ ಋಷಿಗಣ ಎದ್ದು ನಿಂತು ಸ್ವಾಗತ ಹೇಳಿ ಸತ್ಕರಿಸಿತು. ಶೌನಕರು ಆಸನ ನೀಡಿ ಆದರಿಸಿ ಕೃತಾಂಜಲಿಯಾಗಿ ನಿಂತು ಕೇಳಿದರು. ಸೂತಪುತ್ರರೇ! ತಾವು ಎಲ್ಲಿಂದ ಬರೋಣವಾಯಿತು? ಇಷ್ಟು ಕಾಲ ಎಲ್ಲಿ ಸಂಚರಿಸುತ್ತಿದ್ದಿರೀ?

ಶೌನಕರ ಕುತೂಹಲದ ಪ್ರಶ್ನೆಗೆ ಸೌತಿಗಳು ಉತ್ತರಿಸಿದರು. –ಪರೀಕ್ಷಿತನ ಮಗನಾದ ಜನಮೇಜಯನ ಸರ್ಪಸತ್ರಕ್ಕೆ ಹೋಗಿದ್ದೆ. ಅಲ್ಲಿ ಭಗವಾನ್‌ವ್ಯಾಸರ ಶಿಷ್ಯರಾದ ವೈಶಂಪಾಯನರು ಅದ್ಭುತವಾದ ಮಹಾಭಾರತವನ್ನು ಹೇಳಿದರು. ಚಿತ್ರ ವಿಚಿತ್ರವಾದ ರೋಚಕ ರೋಮಾಂಚಕ ಕಥೆಗಳನ್ನು ಕೇಳಿ ಪುಳಕಿತಗೊಂಡೆ. ಧನ್ಯನಾದೆ. ಅಲ್ಲಿಂದ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಸಮಂತಪಂಚಕಕ್ಕೆ ಬಂದೆ. ಪರಶುರಾಮರು ದುಷ್ಟ ಕ್ಷತ್ರಿಯರನ್ನು ಕೊಂದು ಅವರ ರಕ್ತದಿಂದ ಐದು ಮಡುವನ್ನು ನಿರ್ಮಿಸಿದ ಊರೇ ಸಮಂತ ಪಂಚಕ. ಮುಂದೆ ಅವರ ವರದಿಂದಲೇ ಪುಣ್ಯಕ್ಷೇತ್ರವೆನಿಸಿತು. ಅಲ್ಲೆ ಕುರುಪಾಂಡವರ ಯುದ್ಧ ನಡೆದಿದ್ದು, ಅಲ್ಲಿಂದ ನಿಮ್ಮನ್ನು ಕಾಣಲು ಇಲ್ಲಿಗೆ ಬಂದೆ. ಹೇಳಿ, ನಿಮಗೇನು ಹೇಳಲಿ ನಾನು?

ದ್ವೈಪಾಯನರು ಹೇಳಿದ ಅಚ್ಚರಿಯ ಆ ಮಹಾಭಾರತವನ್ನೇ ಹೇಳಿರಿ. ನಮಗೂ ಕೇಳುವ ಕುತೂಹಲ ಶ್ರದ್ಧೆಗಳು ತುಂಬಿವೆ ಎಂದರು ಶೌನಕರು.

ಸಂತೋಷದಿಂದ ಸೂತನಂದನರು ಶುರುಮಾಡಿದರು. ನಿರ್ದೋಷನು ಕಲ್ಯಾಣಗುಣಪೂರ್ಣನು ಸರ್ವೋತ್ತಮನು ಚರಾಚರಗುರುವೂ ಆದ ಶ್ರೀನಾರಾಯಣನನ್ನು ಭಕ್ತಿಯಿಂದ ಗೌರವಿಸಿದರು. ನಮಿಸಿದರು.

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.**

ಮಹಾಭಾರತ ಏನು ಹೇಳುತ್ತದೆ? ಎಂಬುದನ್ನು ಆರಂಭದಲ್ಲಿ ಸಂಕ್ಷೇಪವಾಗಿ ತಿಳಿಸಿದರು.

**ವಿಸ್ತಾರಂ ಕುರುವಂಶಸ್ಯ ಗಾಂಧಾರ್ಯಾಃಧರ್ಮಶೀಲತಾಮ್ ।**
**ಕ್ಷತ್ತುಃ ಪ್ರಜ್ಞಾಂ ಧೃತಿಂ ಕುಂತ್ಯಾಃ ಸಮ್ಯಗ್ದ್ವೈಪಾಯನೋಽಬ್ರವೀತ್ ॥**
**ವಾಸುದೇವಸ್ಯ ಮಾಹಾತ್ಮ್ಯಂ ಪಾಂಡವಾನಾಂ ಚ ಸತ್ಯತಾಮ್ ।**
**ದುರ್ವೃತ್ತಂ ಧಾರ್ತರಾಷ್ಟ್ರಾಣಾಂ ಉಕ್ತವಾನ್ ಭಗವಾನ್ನೃಷಿಃ ॥**

ವಿಸ್ತಾರವಾದ ಕುರುವಂಶದ ಚರಿತ್ರೆ, ಗಾಂಧಾರಿಯ ಧಾರ್ಮಿಕತೆ, ವಿದುರನ ಪ್ರಜ್ಞೆ, ಕುಂತಿಯ ಧೈರ್ಯ, ಶ್ರೀವಾಸುದೇವನ ಮಹಿಮೆ, ಪಾಂಡವರ ಸತ್ಯನಿಷ್ಠೆ, ಧೃತರಾಷ್ಟ್ರನ ಮಕ್ಕಳ ದುರ್ನಡತೆ ಇವುಗಳನ್ನು ವೇದವ್ಯಾಸರರು ಚೆನ್ನಾಗಿ ನಿರೂಪಿಸಿರುವರು ಭಾರತದಲ್ಲಿ.

ಭಾರತದಲ್ಲಿ ಪ್ರಧಾನವಾಗಿ ಎರಡು ವೃಕ್ಷಗಳ ಬಣ್ಣನೆಯಿದೆ. ಒಂದು ಕ್ರೋಧಪ್ರಧಾನವಾದ ದುರ್ಯೋಧನ ಎಂಬ ವೃಕ್ಷ. ಕರ್ಣ ಇದರ ಸ್ಕಂಧ. ಶಕುನಿ ಇದರ ಶಾಖೆಗಳು. ದುಶ್ಶಾಸನ ಇದರ ಸಮೃದ್ಧವಾದ ಹೂವು ಹಣ್ಣುಗಳು. ಅವಿವೇಕಿಯಾದ ಧೃತರಾಷ್ಟ್ರ ಇದರ ಮೂಲ.

ಧರ್ಮಪ್ರಧಾನನಾದ ಯುಧಿಷ್ಠಿರ ಮತ್ತೊಂದು ಮಹಾವೃಕ್ಷ. ಅರ್ಜುನ ಅದರ ಸ್ಕಂಧ. ಭೀಮಸೇನ ಅದರ ಶಾಖೆಗಳು. ನಕುಲಸಹದೇವರು ಸಮೃದ್ಧವಾದ ಹೂವು ಹಣ್ಣುಗಳು. ಕೃಷ್ಣ ವೇದಶಾಸ್ತ್ರಗಳು, ಬ್ರಹ್ಮಜ್ಞಾನಿಗಳು ಇದರ ಮೂಲ.

ಇತಿಹಾಸ ಪುರಾಣಗಳನ್ನು ಅಧ್ಯಯನ ಮಾಡಿ ಅದರ ನೆಲೆಯಲ್ಲಿ ಪರಿಗ್ರಹಿಸಬೇಕು. ಅಜ್ಞಾನಿಯನ್ನು ಅಲ್ಪಜ್ಞಾನಿಯನ್ನು ಕಂಡರೆ ವೇದಕ್ಕೂ ಮಹಾಭಯ! ನನ್ನ ಭಾವವನ್ನು ಇವನು ಹಾಳುಗೆಡುವನೆಂದು.

ವೈಶಂಪಾಯನ-ಜನಮೇಜಯರ ಸಂವಾದರೂಪವಾಗಿ ಮಹಾಭಾರತವನ್ನು ಸೂತಸುತರು ಶೌನಕರು ನಿರೂಪಿಸುತ್ತಾರೆ.

ಶೌನಕರು ಆಗಾಗ ದೀರ್ಘಕಾಲದ ಜ್ಞಾನಸತ್ರವನ್ನು ನಡೆಸಿ ತಮ್ಮೆಲ್ಲ ಶಿಷ್ಯಪರಿವಾರದೊಂದಿಗೆ ಧರ್ಮಾನುಷ್ಠಾನದ ಜೊತೆಗೆ ಜ್ಞಾನ ಸಂಪಾದನೆಯ ಮಹಾಸಾಧನೆ ಮಾಡುತ್ತಿದ್ದರು. ನಾವೂ ಜ್ಞಾನಿಗಳೊಂದಿಗೆ ಸೇರಿ ಪುಣ್ಯಕ್ಷೇತ್ರಗಳಲ್ಲಿ ಆಗಾಗ ಸ್ವಲ್ಪ ಕಾಲವಾದರೂ ಜ್ಞಾಸತ್ರಗಳನ್ನು ಏರ್ಪಡಿಸಿ ತತ್ವಜ್ಞಾನ ಸಂಪಾದನೆಯನ್ನು ಮಾಡಬೇಕು. ಜೀವನದ ಗೋಜು ಗದ್ದಲಗಳನ್ನು ದೂರವಿಟ್ಟು ಆತ್ಮೋದ್ಧಾರದ

ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.



ಪ್ರಯತ್ನವನ್ನು ಪ್ರಾಮಾಣಿಕವಾಗಿ ನಡೆಸಬೇಕು. ಆದರೆ ಇಂದಿನ ಉದರ ಪ್ರಧಾನವಾದ ಜೀವನ ಭರಾಟೆಯ ಯಾಂತ್ರಿಕಜೀವನದಲ್ಲಿ ತಲೆಯಿರುವುದೇ ಮರೆಯುವಂತಾಗಿದೆ. ಐದಾರು ದಿನ ರಾತ್ರಿ ಹಗಲೆನ್ನದೆ ದುಡಿಯುವುದು. ವಾರದ ಕೊನೆಯಲ್ಲಿ ಭೋಗದ ನೆಪದಲ್ಲಿ ಉಚ್ಛೃಂಖಲವಾಗಿ ಬದುಕು ಸವೆಸುವುದು. ಇದಿಷ್ಟೇ ನಮ್ಮ ಜೀವನವಾಗಿದೆ. ಜೀವನದ ಕೇಂದ್ರ ಆತ್ಮೋದ್ಧಾರದ ಸಾಧನೆಯಾಗಲಿ ಕಡೇ ಪಕ್ಷ ಮನಸ್ಸಿನ ನೆಮ್ಮದಿಯಾಗಿರದೆ ಹಣ ಸಂಪಾದನೆಯಾಗಿದೆ. ಹಣ ಅಧಿಕವಾಗಿ ದೇಹ ಹೆಣವಾಗುತ್ತಿದೆ. ಬದುಕಲು ಗಾಳಿ ಬೇಕಾದರೂ ಅದು ಬಿರುಗಾಳಿಯೋ ಸುಂಟರಗಾಳಿಯೋ ಆದರೆ ಬದುಕೇ ನಾಶವಾಗುತ್ತದೆ. ಹಡಗು ಚಲಿಸಲು ನೀರು ಬೇಕಾದರೂ ಸುನಾಮಿಯೇ ಎದ್ದರೆ? ನಮ್ಮ ಜೀವನದಲ್ಲಿ ಹಣ ಚಂಡಮಾರುತ ಸುನಾಮಿಗಳಾಗುತ್ತಿದೆ.

ಜೀವನದ ಕೆಲವು ದಿವಸ ಕೆಲವು ಗಂಟೆಗಳಾದರೂ ಜ್ಞಾನಾರ್ಜನೆಗೆ ಮೀಸಲಾಗಿಟ್ಟರೆ ಬದುಕು ಹಸನಾಗುತ್ತದೆ. ಶೌನಕರು ಸೂತರು ಬಾರದಿದ್ದಾಗ ತಾವೇ ಪ್ರವಚನ ಮಾಡುತ್ತಿದ್ದರೆ ಸೂತರು ಬಂದರೆ ತಾವು ಕೇಳುಗರಾಗುತ್ತಿದ್ದರು. ಕೇಳುವ ಶ್ರೋತೃಗಳು ಬಂದಾಗ ಕೀರ್ತನ ನಮ್ಮ ಸಾಧನೆಯಾಗಬೇಕು. ಹೇಳುವ ಜ್ಞಾನಿಗಳು ಬಂದಾಗ ಶ್ರವಣ ನಮ್ಮ ಸಾಧನೆಯಾಗಬೇಕು. ಇಬ್ಬರೂ ಬರದಿದ್ದಾಗ ಕೇಳಿದ್ದರ ಮನನವಾಗಬೇಕು. ಅಂತೂ ನಮ್ಮ ಬಾಳು ಅರಿವಿಲ್ಲದೆ ಹರಿದು ಹೋಗಬಾರದು. ಹರಿದ ಅರಿವೆಯಾಗಬಾರದು. (ಮುಂದುವರಿಯುತ್ತದೆ)

---

(9ನೇ ಪುಟದಿಂದ....)

ಉತ್ತಮ ಫಲಪ್ರದಗಳಾದವು ಎಂದು ತಿಳಿಸಿದ್ದಾರೆ. ಆ ಮಂತ್ರ ಜಪದಿಂದ ವಾಕ್ಪಟುತ್ವ-ತತ್ವಜ್ಞಾನ ಸಿದ್ಧಿಸಬೇಕಾದರೆ ಆಚಾರ್ಯರು ತಿಳಿಸಿದಂತೆ ವೇದವ್ಯಾಸ ಮಂತ್ರವನ್ನು ಜಪಿಸಬೇಕು. "ದಡ್ಡನಾಗಿದ್ದ ನಾನು ಈ ರೀತಿ ವಾದಾದಿಗಳನ್ನು ಮಾಡಲು ವೇದವ್ಯಾಸ ಮಂತ್ರ ಜಪವೇ ಕಾರಣ" ಎಂಬುದಾಗಿ ಶತಮಾನದ ಪುರುಷರಾದ ಶ್ರೀ ಶ್ರೀ ವಿದ್ಯಾಮಾನ್ಯರು ಕೂಡ ಹೇಳುತ್ತಿದ್ದರು. ಆದ್ದರಿಂದ ನಾವೂ ಕೂಡ ವೇದವ್ಯಾಸರನ್ನು ಸಾಕ್ಷಾತ್ ಭಗವಂತನ ಅವತಾರವೆಂದು ತಿಳಿದು ವೇದವ್ಯಾಸಮಂತ್ರ ಜಪವನ್ನು ಮಾಡಿ ಭಗವಂತನ ಯಥಾರ್ಥ ಜ್ಞಾನವನ್ನು ಪಡೆಯೋಣ. ★

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

# ಶ್ರೀಹರಿಭಕ್ತಿಸಾರ

–ವಿ॥ ಹಯವದನ ಪುರಾಣಿಕ, ತಿರುಪತಿ

**ಗತಿಹೀನರಿಗಾರು ನೀನೇ**
**ಗತಿ ಕಣಾ ಪತಿಕರಿಸಿಕೊಡು ಸದ್**
**ಗತಿಯ ನೀನೆಲೆ ದೇವ ನಿನಗಪರಾಧಿ ನಾನಲ್ಲ ।**
**ಶ್ರುತಿವಚನವಾಡುವುದು ಶರಣಾ**
**ಗತರ ಸೇವಕನೆಂದು ನಿನ್ನನು**
**ಮತವಿಡಿದು ನಂಬಿದೆನು ರಕ್ಷಿಸು ನಮ್ಮನನವರತ ॥೫೪॥**

ಹರಿಯೆ, ಗತಿಯಿಲ್ಲದವರಿಗೆ ಯಾರು ಗತಿಯಾಗುತ್ತಾರೆ? ನೀನೇ ಗತಿ ನೋಡು, ಎಲೆ ದೇವ, ನೀನೊಲಿದುಕೊಡು ಸದ್ಗತಿಯನ್ನು. ನಿನಗೆ ನಾನು ಅಪರಾಧಿಯಲ್ಲ. ಶರಣಾಗತರಿಗೆ ನೀನು ಸೇವಕನಾಗುವಿಯೆಂದು ವೇದ ಮಂತ್ರ ಹೇಳುತ್ತಿದೆ. ನಿನ್ನ ಅನುಮತಿಯನ್ನು ದೃಢವಾಗಿ ಹಿಡಿದು ನಂಬಿದ್ದೇನೆ. ನಮ್ಮನ್ನು ಸದಾ ಕಾಪಾಡು.

## ಗತಿವಿಹೀನರಿಗಾರು, ನೀನೇ ಗತಿ ಕಣಾ

ಅಂದು ಶಿಶುಪ್ರಹ್ಲಾದನನ್ನು ತಂದೆಯಾದ ಹಿರಣ್ಯಕಶಿಪುವೇ ಕೊಲ್ಲಲು ಸರ್ವಪ್ರಯತ್ನ ಮಾಡಿದ. ಗತಿಯಿಲ್ಲದ ಆ ಶಿಶುವಿಗೆ ನೀನು ತಾನೆ ಗತಿಯಾದೆ? ದುಶ್ಶಾಸನ ಸತ್ ದ್ರೌಪದಿಯ ಸೀರೆ ಸೆಳೆವಾಗ ನೀನು ತಾನೆ ಮಾನವನ್ನು ಕಾಪಾಡಿದೆ? ಗಜೇಂದ್ರನ ರಕ್ಷಣೆಗೆ ಯಾರೂ ಬಾರದಿದ್ದಾಗ ನೀನಲ್ಲವೆ ಅವನನ್ನು ಕಾಪಾಡಿದವನು?

## ಪತಿಕರಿಸಿಕೊಡು ಸದ್ಗತಿಯ ನೀನೆಲೆ ದೇವ

ಎಲೆ ದೇವ, ನೀನು ನಿತ್ಯಮುಕ್ತ, ಪೂರ್ಣಾನಂದ ತೃಪ್ತ, ನನ್ನಿಂದ ನಿನಗೇನಾಗಬೇಕಲ್ಲ. ನನ್ನನ್ನು ಕಾಪಾಡಿದರೆ ನಿನಗೆ ಏನೂ ಲಾಭವಿಲ್ಲ, ಬಿಟ್ಟರೆ ನಷ್ಟವೂ



ಇಲ್ಲ. ಕರುಣಾಸಾಗರ ನೀನು ಕೇವಲ ಕರುಣೆಯಿಂದಲೆ ನನಗೊಲಿದು ಸದ್ಗತಿ ನೀಡು.

## ನಿನಗಪರಾಧಿ ನಾನಲ್ಲ

ನಿನಗೆ ನಾನೇನಾದರೂ ಅಪರಾಧಗೈದಿರುವೆನೆ? ಎಂದು ನಾನು ಯೋಚಿಸಿದೆ. ಆಗ ಹೊಳೆಯಿತು. ಹೌದು ನಾನು ನಿನಗೆ ಅಪರಾಧಿ. ನೀರು ಮೀನನ್ನು ಸದಾ ಕಾಪಾಡುವಂತೆ ನೀನು ನನ್ನನ್ನು ಸದಾ ಕಾಪಾಡುತ್ತಿದ್ದರೂ ನಾನು ಮಾತ್ರ ನಿನ್ನನ್ನು ಮರೆತೆ. ಅನಾದಿಕಾಲದಿಂದ ಮರೆತೇ ಬಿಟ್ಟಿದ್ದೇನೆ. ಇದು ಕೃತಘ್ನತೆಯ ಪರಮಾವಧಿ. ಕೃತಘ್ನೇ 'ನಾಸ್ತಿ ನಿಷ್ಕೃತಿಃ! ಮಾಡಿದುಪಕಾರವನ್ನು ಮರೆವವನಿಗೆ ಪ್ರಾಯಶ್ಚಿತ್ತವಿಲ್ಲ. ಅದರಿಂದ ಹೇಳುತ್ತಾರೆ

**ವಿಪದೋ ನೈವ ವಿಪದಃ ಸಂಪದೋ ನೈವ ಸಂಪದಃ ।**
**ವಿಪದೌ ವಿಸ್ಮರಣಂ ವಿಷ್ಣೋಃ ಸಂಪನ್ನಾರಾಯಣ ಸ್ಮೃತಿಃ ॥**

'ವಿಪತ್ತು ವಿಪತ್ತಲ್ಲ, ಸಂಪತ್ತು ಸಂಪತ್ತಲ್ಲ. ಹರಿಯನ್ನು ಮರೆಯುವುದೇ ವಿಪತ್ತು ಹರಿಯನ್ನು ನೆನೆಯುವುದೇ ಸಂಪತ್ತು' ಎಂದು.

ಆದರೆ, ಎಲೆ ದೇವ, ಇದೆಲ್ಲ ಹಳೆಯ ಕಥೆ. ನಾನೀಗ ನಿನ್ನನ್ನು ಸದಾ ನೆನೆಯುತ್ತಿದ್ದೇನೆ. ನಿನಗೆ ನಾನು ಅಪರಾಧಿಯಲ್ಲ.

## ಶ್ರುತಿವಚನವಾಡುವುದು ಶರಣಾಗತರ ಸೇವಕನೆಂದು ನಿನ್ನನು

**ಯಮೇವೈಷ ವೃಣುತೇ ತೇನ ಲಭ್ಯಃ**
**ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾರಿ ॥**
**ಅಹಂ ಭಕ್ತಪರಾಧೀನಃ ।**

ಎಂದು ಮುಂತಾಗಿ ಶ್ರುತಿ ಪುರಾಣವಚನಗಳು ಹೇಳುವಂತೆ ಶರಣಾಗತನಾದ ಬಲಿಯ ಮನೆಯ ಬಾಗಿಲ ಕಾಯುವವನು, ಪುಂಡಲೀಕನ ಮನೆಯಲ್ಲಿ ಕಟಿಯಲ್ಲಿ ಕರವಿಟ್ಟು ನಿಲ್ಲುವವನು ನೀನು ಶರಣಾಗತರಿಗೆ ಸೇವಕನಾಗುವಿ ತಾನೆ?

## ನಿನ್ನನು ಮತವಿಡಿದು ನಂಬಿದೆನು

**'ಸಮಾಯಾತ ಸಮಾಯತ ಯೇ ಯೇ ಮೋಕ್ಷಪದೇಚ್ಛವಃ ।'**

'ಮುಕ್ತಿಯನ್ನು ಬಯಸುವವರೆಲ್ಲ ನನ್ನ ಬಳಿಗೆ ಬನ್ನಿ ಬನ್ನಿರೆಂದು' ಕೈಬೀಸಿ

ಕರೆಯುವವನು, ಶ್ರೀರಾಮ, ನೀನೊಬ್ಬನೆ ತಾನೆ? ಇನ್ನಾರಿದ್ದಾರೆ? ಅದರಿಂದ ನಾನು ನಿನ್ನನ್ನು ಸೇರುವುದಕ್ಕೆ ನಿನ್ನ ಅನುಮತಿ ಇದ್ದೇ ಇದೆ ಎಂದು ದೃಢವಾಗಿ ಹಿಡಿದು ಅದನ್ನು ನಂಬಿದ್ದೇನೆ.

## ರಕ್ಷಿಸು ನಮ್ಮ ನನವರತ

ಹುಟ್ಟಿದ ಬಳಿಕ ಸಾಯುವವರೆಗೆ ರಕ್ಷಿಸಿದರೆ ಅದು ರಕ್ಷಿಸಿದಂತಾಗುವುದಿಲ್ಲ. ಅನವರತರಕ್ಷಿಸಬೇಕು. ಅದು ಮೋಕ್ಷ ನೀಡುವುದರಿಂದ ಮಾತ್ರವೇ ಸಾಧ್ಯ. ಮೋಕ್ಷ ನೀಡುವವನು ನೀನಾದ್ದರಿಂದ ನೀನೇ ಅನವರತ ನಮ್ಮನ್ನು ಕಾಪಾಡಬೇಕು. ನನ್ನೊಬ್ಬನನ್ನೇ ಅಲ್ಲ, ನನ್ನವರೆಲ್ಲರನ್ನೂ, ಎಲ್ಲ ಹರಿದಾಸರನ್ನೂ ನೀನು ಅನವರತ ಕಾಪಾಡು. ★

---

(7ನೇ ಪುಟದಿಂದ ಮುಂದುವರಿದುದು)

ಮಾತ್ರವಲ್ಲದೆ, ತಾನು ಹರಿಯುವಾಗ ಹಿಮಾಲಯದಲ್ಲಿ ಇದ್ದಂತಹ ಅನೇಕ ವಿಧವಾದ ಗಿಡಮೂಲಿಕೆಗಳನ್ನು, ಅದರ ಸಾರವನ್ನು ತನ್ನ ನೀರಿನಲ್ಲಿ ಸೇರಿಸಿಕೊಂಡು ಹರಿಯುತ್ತಾಳೆ. ಗಂಗೆಯು ಎರಡು ಬದಿಯಲ್ಲಿ ಇರತಕ್ಕಂತಹ ತನ್ನನ್ನೇ ನಂಬಿದ ಜನರ ಕಾಯಿಲೆಗಳನ್ನು ಪರಿಹರಿಸಿಕೊಡುವ ತಾಕತ್ತು ಉಳ್ಳವಳಾಗಿ ಸಮುದ್ರಕ್ಕೆ ಹರಿಯುತ್ತಾ ಇದ್ದಾಳೆ. ಭಗವಂತನ ಸನ್ನಿಧಾನವಾಗಿರುವ ಹಿಮಾಲಯದಿಂದ ಸಂಸಾರ ಸಮುದ್ರದ ಕಡೆಗೆ ಹೋಗುವುದು ಪಂಡಿತರ ಲಕ್ಷಣ. ಸಜ್ಜನರು, ಪಂಡಿತರು ತಾವು ಭಗವಂತನ ಬಳಿಯಿಂದ ಬರುವಾಗ ತಿಳುವಳಿಕೆ ಎಂಬ ಔಷಧಿಯನ್ನು ಹಿಡಿದುಕೊಂಡು ಬರುತ್ತಾರೆ. ರೋಗಿಗಳಂತೆ ಎರಡು ಇಕ್ಕೆಲಗಳಲ್ಲಿರುವ ನಾವು ಅವರಿಂದ ಜ್ಞಾನ-ತಿಳುವಳಿಕೆಯನ್ನೊಳಗೊಂಡ ಔಷಧಿ ಮಿಶ್ರಿತ ನೀರನ್ನು ಸ್ವೀಕರಿಸಿದರೆ ನಮಗೆ ಶ್ರೇಯಸ್ಸು. ಇದೇ ರೀತಿಯಲ್ಲಿ ಗಂಗೆ ತನ್ನ ಪಾಡಿಗೆ ತಾನು ಹರಿದುಕೊಂಡು ಹೋಗುತ್ತಾಳೆ ಶುಕಾಚಾರ್ಯರಂತೆ. ಶುಕಾಚಾರ್ಯರು ಎಲ್ಲಿಯೂ ಕೂಡ ಯಾರಿಗೂ ಕರೆದು ಉಪದೇಶ ಮಾಡುವವರಲ್ಲ. ತಮ್ಮ ಪಾಡಿಗೆ ತಾವು ಹೋಗುತ್ತಿರುವಾಗ ಇಕ್ಕೆಲದಲ್ಲಿ ಇರುವ ಜನರು, ತಾವೇನಾದರು ಜ್ಞಾನಪಡೆಯೋಣ ಎಂದು ಅವರ ಬಳಿಗೆ ತಾವಾಗಿ ಬಂದು ಅವರಿಂದ ಜ್ಞಾನಾರ್ಜನೆ ಮಾಡಿಸಿಕೊಳ್ಳುತ್ತಿದ್ದರು. ಪಂಡಿತರು ಕೂಡ ತಮ್ಮ ಪಾಡಿಗೆ ತಾವು ಹರಿದುಕೊಂಡು ಹೋಗುತ್ತಾರೆ. ಇನ್ನೊಬ್ಬನಿಗೆ ಉಪಟಳ ಕೊಡದೆ ಅವರ ಜೀವನ ಸಾಗುತ್ತದೆ. ಅಂತಹವರನ್ನು 'ಪಂಡಿತ' ಎಂಬ ಶಬ್ದದಿಂದ ಕರೆಯುತ್ತಾರೆ ಎಂದು ಧೃತರಾಷ್ಟ್ರನ ಮೂಲಕ ಸಮಾಜಕ್ಕೆ ವಿದುರ ಹೇಳುತ್ತಿದ್ದಾನೆ. ★

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.





# ಅಪಾತ್ರೋಪದೇಶ ಸಲ್ಲದು

-ಡಾ। ಎನ್. ವೆಂಕಟೇಶ ಆಚಾರ್ಯ, ಬೆಂಗಳೂರು

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ದೇವೈರತ್ರಾತಿ ಎಚಿಕಿತ್ಸಿತಂ ಪುರಾ**
**ನ ಹಿ ಸುಜ್ಞೇಯೋಣುರೇಷ ಧರ್ಮಃ**
**ಅನ್ಯಂ ವರಂ ನಚಿಕೇತೋ ವೃಣೇಷ್ವ**
**ಮಾ ಮೋಪರೋತ್ಸೀರತಿ ಮಾ ಸೃಜೈವಮ್**

(ಹಿಂದೆ ಅಗ್ನಿಯೊಳಗಿರುವ ಭಗವಂತನ ಬಣ್ಣನೆಯನ್ನು ಅಂತಕನಾದ ಯಮನು ಹಂತ ಹಂತವಾಗಿ ನಿರೂಪಿಸಿದನು. ಆದರೆ ಅದಕ್ಕಿಂತ ಮೃತ-ಮುಕ್ತ ನಿಯಾಮಕನಾದ ಭಗವಂತನ ಮಹಿಮೆ ತಿಳಿದಾಗ ನೂಕಿ ಹೋಗುವ ಸುಖ ಸುತರಾಂ ನಿಶ್ಚಿತ. ಹೀಗೆ ಮತ್ತೆ ದೇವರ ಬಗೆಗೆ ಜಿಜ್ಞಾಸೆಯ ಆಸೆ ಸೂಕ್ತವಾಗಿದೆ.)

ದೇವತೆಗಳಿಂದಲೂ ಈ ವಿಚಾರದಲ್ಲಿ ಮೊದಲು ಚರ್ಚಿಸಲ್ಪಟ್ಟಿದೆ. ಅಷ್ಟು ಸಂದಿಗ್ಧವಾದುದು ಈ ವಿಚಾರ. ಇದು ಸುಲಭವಾಗಿ ಅರಿವಿಗೆ ಎಟುಕುವಷ್ಟು ಸ್ಥೂಲವೇನೂ ಅಲ್ಲ. ಇದು ಸುಜ್ಞೇಯ ಅಲ್ಲ. ಈ ಭಗವಂತನು ಸೂಕ್ಷ್ಮವಾಗಿ ಅವ್ಯಕ್ತನಾಗಿದ್ದಾನೆ. ಆದ್ದರಿಂದ 'ಅಣು' ಎನ್ನುತ್ತಾರೆ. ಎಲ್ಲರಿಗೂ ಧಾರಕನಾದ ಇವನಿಗೆ ಧರ್ಮ ಎಂಬ ಹೆಸರಿದೆ. ಹೀಗಾಗಿ ಇದು ಗಹನವಾದುದು. ಇದನ್ನು ಬಿಟ್ಟು ಬೇರೆ ವರ ಬಯಸು. (ಉಪರೋಧ-ಹಠ) ಇದನ್ನೇ ಹೇಳಬೇಕೆಂಬ ಹಠ ಬೇಡ. ಆಗ ನಚಿಕೇತ ನುಡಿದನು. ಈ ನೆಪವನ್ನು ಒಡ್ಡಿ ನನ್ನ ಪ್ರಶ್ನೆಯನ್ನು ಅತಿಸೃಜ= ಕೈ ಬಿಡಬೇಡ ಎಂದು (ಕೈ ಮುಗಿದನು) ಹೇಳಿದನು.

ಜೀವನದಲ್ಲಿ ಕಷ್ಟ ಎಂದು ನಾವು ಏನನ್ನು ಕೈ ಬಿಟ್ಟಿದ್ದೇವೆ? ಮನೆ ಕಟ್ಟಲು ಸಾಹಸ ಮಾಡುವುದಿಲ್ಲವೆ? ಮಕ್ಕಳ ಮದುವೆಗಾಗಿ ತಗ್ಗಿ ಬಗ್ಗಿ ಸಾಗುವುದಿಲ್ಲವೆ? ಕಷ್ಟ ಚಂಚಲ-ಫಲ ಅಚಲ. ಈ ಸಾಹಸ ಜ್ಞಾನ ಪಡೆಯಲು ಏಕಾಗಬಾರದು? ಇದ ನಚಿಕೇತನ ದೃಷ್ಟಿ.

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ಭಗವಂತನ ಮಹಿಮೆ ಕೇಳಿದವರಿಗೆಲ್ಲಾ ಹೇಳುವಂತಹುದಲ್ಲ. ಅದು ಅಪಾತ್ರರಿಗೆ ಸಿಕ್ಕಲ್ಲಿ ಅಖಿಲ ಜನರಿಗೂ ಆತಂಕ-ದುಗುಡ ಆದೀತು.

ಇನ್ನು ಕೆಲವು ಮಂದಿಗೆ ಏನನ್ನಾದರೂ ಕೇಳಬೇಕು ಎಂಬ ದೃಷ್ಟಿ. ದೇವರದ್ದಾದರೂ ಸರಿ. ಲೌಕಿಕವಾದರೂ ಸರಿ. ಸಿಕ್ಕಿದ್ದನ್ನು ಕೇಳೋಣ ಎಂಬ ಅಸಡ್ಡೆ. ಅವರಿಗೆ ದೇವರು ಎಂದರೆ ಹತ್ತರಲ್ಲಿ ಒಂದು. ಇಂತಹವರಿಗೆ ಉಪದೇಶಿಸಿದರೆ ಭಗವಂತನೂ ಸಹ ಸಾಮಾನ್ಯ ಎಂದಾಗಿ ಸಾರಾಸಾಗಟಾಗಿ ಮುಂದೆ ತಿರಸ್ಕೃತವಾದಂತೆ. ಹೀಗೆ ಅನಾಸಕ್ತರಿಗೆ ಉಪದೇಶಿಸಿದರೆ ಉಪದೇಶಕನಿಗೂ ನರಕ ನಿಶ್ಚಿತ. ಆದ್ದರಿಂದ ಯಮ ಬೇರೆ ವರ ಕೇಳು. ಪರವಾಗಿಲ್ಲ ಎಂದ. ಇದು ಯಮನ ದೃಷ್ಟಿ. ಬೇರೆ ವರ ಬೇಕಾದರೆ ಕೇಳು ಎಂದಾಗ ನಚಿಕೇತ ನಲುಗಲಿಲ್ಲ.

ನಚಿಕೇತ ಹಾಗಾದರೆ ಸರಿ ಎಂದು ಬೇರೆ ಅಲೋಚನೆ ಮಾಡಲಿಲ್ಲ. 'ಅನನ್ಯಾಶ್ಚಿಂತಯಂತೋ ಮಾಂ' ಎಂಬಂತೆ ಅನನ್ಯ ಭಕ್ತನಿಗೆ ಮಾತ್ರ ಭಗವಂತನ ಅನುಗ್ರಹ. ಈ ಧೃಡತೆ ಸಾಧಕನಿಗೆ ಇರಬೇಕು.

'ಪರಿಪಶ್ನೇನ ಸೇವಯಾ' ಎಂಬಂತೆ ಜ್ಞಾನಿಗಳು ಸೇವೆ ಮಾಡಿದಾಗ, ಪ್ರಶ್ನೆ ಮಾಡಿದಾಗ ಮಾತ್ರವೇ ಉತ್ತರಿಸುವುದು ಎಂದಿಲ್ಲವೇ ಕೃಷ್ಣ? ಅದಕ್ಕಾಗಿ ನಚಿಕೇತನು ಪ್ರಾರ್ಥನೆ ಮಾಡಿ ಕೈ ಬಿಡಬೇಡಿ ಉತ್ತರಿಸಿ ಎಂದಿದ್ದಾನೆ.

ಯಮನು ಇದು ತುಂಬಾ ಕಠಿಣ-ದೇವತೆಗಳೂ ತುಂಬಾ ತಲೆಕೆಡಿಸಿಕೊಂಡಿದ್ದಾರೆ. ಇದು ಬೇಡ ಎಂದು ಹೇಳಿದನು. ನಚಿಕೇತ ಅದನ್ನು ಪಟ್ಟುಮಾಡಿಕೊಂಡ. ದೇವತೆಗಳಿಗೂ ಸುಲಭ ಅಲ್ಲ ಎಂದ ಮೇಲೆ ಇದು ತುಂಬಾ ಪ್ರಮುಖ ಎಂದೇ ಆಯಿತು. ಇದನ್ನೇ ನನಗೆ ಹೇಳು ಎಂದು ಹಠ ಹಿಡಿದನು.

ಕಷ್ಟ ಎಷ್ಟೇ ಬಂದರು ಕಲಿಕೆ ಬಿಡಬಾರದು. ಅಭ್ಯಾಸ ತಪ್ಪಬಾರದು. ಅದಕ್ಕಾಗಿ ನಚಿಕೇತ ಧೃಢವಾಗಿ ನಿಂತ. ಭಂಜರು ಭೂಮಿಯಲ್ಲಿ ಬೇಕಾದರೂ ಬೀಜವನ್ನು ಬಿತ್ತು ಷಂಡನಿಗಾದರೂ ಕನ್ಯೆಯನ್ನು ಕೊಡು. ಮಂಗನ ಕೈಯಲ್ಲಿ ಮಾಲೆಯನ್ನಾದರೂ ನೀಡಿ. ಅದು ತತ್ಕಾಲಕ್ಕೆ ವ್ಯರ್ಥ. ಆ ಜನ್ಮದಲ್ಲಿ ನಿಷ್ಫಲ. ಅಯೋಗ್ಯನಿಗೆ ಶಾಸ್ತ್ರ ನೀಡಿದರೆ ನಿಷ್ಫಲ ಅಲ್ಲ. ನಿರಂತರ ನರಕ ಫಲ. ಆದ್ದರಿಂದ ಇವನು ಯೋಗ್ಯನೆಂದು ನಿರ್ಧಾರ ಮಾಡಿ ನೀಡೋಣ. ಇಲ್ಲವಾದರೆ ನಿರಾಕರಿಸೋಣ ಎಂಬ ನೀತಿ ಯಮನದ್ದು.

(ಮುಂದುವರಿಯುವುದು)

ಗೋವುಗಳನ್ನು-ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.



**ಸಾಧನೆಗೊಂದು ಮೆರುಗು**

# ಗಾಯತ್ರಿಯ ಮೂಲಕ ಉಪಾಸನಾವಿಶೇಷಗಳು

-ಸಗ್ರಿ ರಾಘವೇಂದ್ರ ಉಪಾಧ್ಯಾಯ

ಪ್ರತಿನಿತ್ಯ ಜಪಿಸುವ ಗಾಯತ್ರೀಮಂತ್ರದಲ್ಲಿ **'ಅತಿಪರಿಚಯಾದವಜ್ಞಾ'** ಎಂದಿರುವಂತೆ ಅವಗಣನೆಯ ಭಾವ ಉಂಟಾಗದೆ, ಬದಲಾಗಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ತನ್ಮಯತೆ ಸಿದ್ಧಿಸಬೇಕೆಂದರೆ ಧ್ಯೇಯರೂಪ ಹಾಗೂ ಮಂತ್ರಾರ್ಥ ಇವೆರಡರ ಚಿಂತನೆಯೊಂದಿಗಷ್ಟೇ ಗಾಯತ್ರೀಮಂತ್ರವನ್ನು ಜಪಿಸಿದರೆ ಸಾಲದು, ಬದಲಾಗಿ ನಮ್ಮ ಬದುಕಿನ ಸಾರ್ಥಕ್ಯಕ್ಕಾಗಿ ಶಾಸ್ತ್ರದಲ್ಲಿ ವಿಧಿಸಲಾದ ಬೇರೆ ಬೇರೆ ಉಪಾಸನೆಗಳನ್ನು ಗಾಯತ್ರೀಮಂತ್ರಾರೂಢವಾಗಿ ಚಿಂತಿಸುತ್ತ ಗಾಯತ್ರೀಮಂತ್ರವನ್ನು ಜಪಿಸಬೇಕು. ಇದರಿಂದಾಗಿ ಗಾಯತ್ರೀಮಂತ್ರವನ್ನು ತನ್ಮಯತೆಯಿಂದ ಜಪಿಸಿದಂತಾಗುವುದಷ್ಟೇ ಅಲ್ಲದೆ, ಆಯಾ ಉಪಾಸನೆಯನ್ನೂ ಗಾಯತ್ರೀಮಂತ್ರದ ಜಪದ ಜೊತೆಗೆ ನಡೆಸಿದಂತಾಗುವುದು.

ಅಂತಹ ಕೆಲವು ಉಪಾಸನೆಗಳನ್ನು ಪರಿಶೀಲಿಸೋಣ:

## ಸ್ವಾತಂತ್ರ್ಯಗುಣದ ಚಿಂತನೆ:

ಭಗವಂತನ ಗುಣಗಳಲ್ಲೆಲ್ಲ ಶ್ರೇಷ್ಠವಾದುದು ಸ್ವಾತಂತ್ರ್ಯ. ಯಾಕೆಂದರೆ **'ಸರ್ವಧರ್ಮೋಪಪತ್ತೇಶ್ಚ'** ಎಂಬ ಬ್ರಹ್ಮಸೂತ್ರದಲ್ಲಿ ಸಿದ್ಧಾಂತಿಸಿರುವಂತೆ ಅವನ ಸ್ವಾತಂತ್ರ್ಯಗುಣದ ಉಪಪತ್ತಿಯ ಆಧಾರದಿಂದಲೇ ಅವನ ಗುಣಪರಿಪೂರ್ಣತ್ವವನ್ನೂ, ದೋಷದೂರತ್ವವನ್ನೂ, ದೃಡಪಡಿಸಿಕೊಳ್ಳಬಹುದಾಗಿದೆ. ಇರವು, ತಿಳುವಳಿಕೆ ಹಾಗೂ ನಡತೆಗಳಲ್ಲಿ ಮತ್ತೊಬ್ಬರಿಗೆ ಅಧೀನ ಆಗದೆ ಇರುವಿಕೆಯ ರೂಪದ ಸ್ವಾತಂತ್ರ್ಯ, **'ಸ್ವೇ ಮಹಿಮ್ನಿ ಪ್ರತಿಷ್ಠಿತಃ'** ಎಂದು ಉಪನಿಷತ್ತಿನಲ್ಲಿ ಘೋಷಿಸಲ್ಪಟ್ಟಿರುವ ಭಗವಂತನಲ್ಲಷ್ಟೇ ಅಸಾಧಾರಣವಾಗಿ ಇರುವಂತಹದ್ದು. ಆದುದರಿಂದ ಈ ಸ್ವಾತಂತ್ರ್ಯವನ್ನು ಗಾಯತ್ರೀ ಮಂತ್ರಾರೂಢವಾಗಿ ಚಿಂತಿಸಲೇಬೇಕು.

ಗಾಯತ್ರಿಯಲ್ಲಿಯ **'ವರೇಣ್ಯ'**- ಎಂಬುದಕ್ಕೆ ಶ್ರೇಷ್ಠ ಎಂಬ ಅರ್ಥ. **'ವರಣೀಯೋ ಗುಣೋನ್ನತೇ'** ಎಂಬುದಾಗಿ ಶ್ರೀಮಧ್ವಗುರುಗಳು ತಮ್ಮ ಋಗ್ಭಾಷ್ಯದಲ್ಲಿ ಗುಣಗಳ

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

ಔನ್ನತ್ಯದಿಂದಾಗಿ, ಹೆಚ್ಚುಗಾರಿಕೆಯಿಂದಾಗಿ ವರಣೀಯನೆನಿಸಿರುವನು. ಶ್ರೇಷ್ಠನೆನಿಸಿರುವವನು ಅವನು ಎಂದು ಅರ್ಥೈಸಿರುವರು. ಹೀಗೆ ಸವಿತೃನಾರಾಯಣನ ವರೇಣ್ಯತ್ವಕ್ಕೆ, ಶ್ರೇಷ್ಠತ್ವಕ್ಕೆ ಅವನ ಪ್ರತಿಯೊಂದು ಗುಣವೂ ಪ್ರಯೋಜಕವಾಗಿರುವಂತೆ ಲೌಕಿಕ ದೃಷ್ಟಿಯಿಂದ ಆ ಗುಣಗಳಲ್ಲೆಲ್ಲ ಶ್ರೇಷ್ಠವೆನಿಸಿರುವ ಸ್ವಾತಂತ್ರ್ಯಗುಣವು ವಿಶೇಷವಾಗಿ ಪ್ರಯೋಜಕವಾಗಿದೆ. ಆದ್ದರಿಂದ ಗಾಯತ್ರಿಯ ವರೇಣ್ಯಶಬ್ದಾರ್ಥದ ಚಿಂತನೆ ನಡೆಸುವಾಗ ಸ್ವಾತಂತ್ರ್ಯ ಎಂಬ ಅಸಾಧಾರಣವಾದ ಗುಣದಿಂದಾಗಿ ವರೇಣ್ಯನೆನಿಸಿರುವನು ಎಂದು ಚಿಂತಿಸಬಹುದಾಗಿದೆ.

ಹಾಗೆಯೇ ಗಾಯತ್ರಿಯ **'ಸವಿತುಃ'** ಶಬ್ದ ತಿಳಿಸುವಂತೆ ಲಕ್ಷ್ಮೀದೇವಿಯಿಂದ ಪ್ರಾರಂಭಿಸಿ ಪ್ರತಿಯೊಬ್ಬರಿಗೂ ಒಂದೊಂದು ಬಗೆಯ ಸೃಷ್ಟಿಯನ್ನು ನೀಡಿ, **'ತತ'** ಶಬ್ದ ತಿಳಿಸುವಂತೆ ಸೃಷ್ಟಿಸಲ್ಪಟ್ಟ ಅವು ತಾವಾಗಿಯೇ ತಮ್ಮ ತಮ್ಮ ಪ್ರವೃತ್ತಿಯನ್ನು ನಡೆಸಲು ಸಮರ್ಥಗಳೆನಿಸಲಾರವೆಂದು, **'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್'** ಎಂದು ತೈತ್ತಿರೀಯೋಪನಿಷತ್ತು ತಿಳಿಸುವಂತೆ ಅವುಗಳಲ್ಲೆಲ್ಲ ಆಯಾರೂಪದಿಂದ ಹೊಕ್ಕು ವ್ಯಾಪಿಸಿರುವ ಅವನು ತನ್ನ ಇರವಿಗಾಗಿ ಮತ್ತೊಬ್ಬರನ್ನು ಅಪೇಕ್ಷಿಸಲಾರ ಎಂದು ಸಿದ್ಧಿಸುವುದು. **'ಧಿಯೋ ಯೋನಃ ಪ್ರಚೋದಯಾತ್'** ಎಂದು ಗಾಯತ್ರೀಮಂತ್ರಕ್ಕೆ ಮುಖ್ಯಾಭಿಮಾನಿನಿಯಾದ ಲಕ್ಷ್ಮೀದೇವಿಯಿಂದ ಪ್ರಾರಂಭಿಸಿ ಪ್ರತಿಯೊಬ್ಬರಿಂದಲೂ ತಮ್ಮ ಬುದ್ಧಿಯನ್ನು ಪ್ರೇರಿಸುವವನೆಂದು ಸ್ತುತನಾಗಿರುವ ಭಗವಂತ ತನ್ನ ಬುದ್ಧಿ ಪ್ರೇರಣೆಗಾಗಿ ಮತ್ತೊಬ್ಬನನ್ನು ಅವಲಂಬಿಸಲಾರ ಎಂದು ಸಿದ್ಧಿಸುವುದು. **'ಭರ್ಗಃ'** ಎಂಬ ಶಬ್ದ ಸೂಚಿಸುವಂತೆ ಎಲ್ಲರ ಪೋಷಣೆ (ಭರಣ) ಅವಕ್ಕೆ ಅನುಗುಣವಾಗಿ ಚಟುವಟಿಕೆ (ಗಮನ) ಇವನ್ನು ನಡೆಸುವ ಭಗವಂತ ತನ್ನ ಚಟುವಟಿಕೆಗಾಗಿ ಮತ್ತೊಬ್ಬರನ್ನು ಆಶ್ರಯಿಸಿಲಾರ ಎಂದು ಸಿದ್ಧಿಸುವುದು.

ಹೀಗೆ **'ತತ್' 'ಸವಿತುಃ' 'ಧಿಯೋ ಯೋನಃ ಪ್ರಚೋದಯಾತ್' 'ಭರ್ಗಃ'** ಈ ಪದಗಳಿಂದ ಭಗವಂತನ ಸ್ವಾತಂತ್ರ್ಯ ಗುಣವನ್ನು ಯುಕ್ತಿಯಿಂದ ಸಾಧಿಸಿಕೊಂಡು, **'ವರೇಣ್ಯ'** ಪದದಿಂದ ಅವನ ಶ್ರೇಷ್ಠತ್ವಕ್ಕೆ ಪ್ರಯೋಜಕವಾಗಿ ಅದನ್ನು ಚಿಂತಿಸಲಾದಲ್ಲಿ ಭಗವಂತನ ಶ್ರೇಷ್ಠಗುಣವಾದ ಸ್ವಾತಂತ್ರ್ಯವನ್ನು ಗಾಯತ್ರೀಮಂತ್ರಾರೂಢವಾಗಿ ಧ್ಯಾನಿಸಿದಂತಾಗಿ ಗಾಯತ್ರೀಮಂತ್ರದ ಜಪದ ಜೊತೆಗೆ ಭಗವಂತನ ಸ್ವಾತಂತ್ರ್ಯಗುಣದ ಚಿಂತನೆಯನ್ನೂ ನಡೆಸಿದಂತಾಗಬಲ್ಲದು.

## ಗುಣಪೂರ್ಣತ್ವ ದೋಷದೂರತ್ವದ ಚಿಂತನೆ:

ಭಗವಂತನ ಶ್ರೇಷ್ಠವ್ಯಕ್ತಿತ್ವದ ಎರಡು ಮುಖಗಳು-ಗುಣಪೂರ್ಣತ್ವ ಹಾಗೂ

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**



ದೋಷದೂರತ್ವ, ಅವನ ಸರ್ವೋತ್ತಮತ್ವವನ್ನು ಈ ಎರಡು ಧರ್ಮಗಳೇ ವಿಶೇಷವಾಗಿ ಸಾಧಿಸುವುವು. ಭಗವಂತನು ಸಕಲಗುಣಪರಿಪೂರ್ಣನಾಗಿರುವುದರಿಂದ ಹಾಗೂ ಸರ್ವದೋಷ ದೂರನಾಗಿರುವುದರಿಂದ ಸರ್ವೋತ್ತಮನೆನಿಸಿರುವನು ಎಂದು. ಆದುದರಿಂದ ಭಗವಂತನ ಸರ್ವೋತ್ತಮತ್ವದ ಸಮರ್ಥನೆಗಾಗಿ ಸ್ವಯಂವರದ ನಾಟಕದಲ್ಲಿ ತೊಡಗಿದ್ದ ಲಕ್ಷ್ಮೀದೇವಿ **'ವಿಲೋಕ ಯಂತೀ ನಿರವದ್ಯಮಾತ್ಮನಃ ಪದಂ ಧ್ರುವಂ ಚಾವ್ಯಭಿಚಾಂಸದ್ಗುಣಮ್'** (ಭಾಗ 8-8-18) ಎಂದು ಭಾಗವತ ವರದಿಸುತ್ತಿರುವಂತೆ ಭಗವಂತನ ಸರ್ವೋತ್ತಮತ್ವಕ್ಕೆ ಸಾಧಕವಾಗಿ ಅವನ ಗುಣಪೂರ್ಣತ್ವವನ್ನೂ, ದೋಷದೂರತ್ವವನ್ನೂ ಬಳಸಿಕೊಂಡಿರುವಳು.

ಅಂತಹ ಗುಣಪೂರ್ಣತ್ವವನ್ನೂ ದೋಷದೂರತ್ವವನ್ನೂ ಗಾಯತೀ ಮಂತ್ರದಿಂದ ಹೀಗೆ ಚಿಂತಿಸಬೇಕು. ಗುಣಗಳ ಔನತ್ಯದಿಂದ ವರಣೀಯ ಎನಿಸಿರುವ ಸವಿತೃನಾರಾಯಣನಲ್ಲಿ ಅಂತಹ ವರೇಣ್ಯತ್ವಕ್ಕೆ ಪ್ರಯೋಜಕವಾಗಿ ಪ್ರತಿಯೊಂದು ಗುಣವೂ ಸೇರಿಕೊಂಡಿದೆ ಎಂದು ವರೇಣ್ಯ ಶಬ್ದಾರ್ಥದ ಹಿನ್ನಲೆಯಲ್ಲಿ ಸರ್ವಗುಣಪೂರ್ಣತ್ವವನ್ನು ಚಿಂತಿಸಬಹುದು. **'ಗುಣೈಸ್ತತಃ..........'** ಎಂದು ಋಗ್ಭಾಷ್ಯದಲ್ಲಿ ಶ್ರೀಮಧ್ವರು ತತಶಬ್ದಕ್ಕೆ ಗುಣಗಳಿಂದ ವ್ಯಾಪ್ತನಾಗಿರುವವನೆಂದು ಅರ್ಥೈಸಿರುವುದಕ್ಕನುಗುಣವಾಗಿ ಗಾಯತ್ರಿಯ ತತ್‌ಶಬ್ದದಿಂದಲೂ ಭಗವಂತನ ಗುಣಪೂರ್ಣತ್ವನ್ನೂ ಚಿಂತಿಸಬಹುದಾಗಿದೆ.

ಹೀಗೆ ಗುಣಪೂರ್ಣನಾಗಿರುವುದರಿಂದಲೇ ಅವನು ದೋಷದೂರ ಎಂದು ಯುಕ್ತಿಯಿಂದ ದೋಷದೂರತ್ವವನ್ನು ಧ್ಯಾನಿಸಬಹುದಾಗಿದೆ. ಜ್ಞಾನಪೂರ್ಣನಾಗಿರುವುದರಿಮದ ಅಜ್ಞಾನ, ವಿಪರೀತಜ್ಞಾನ, ಸಂದೇಹ ದೋಷಗಳಿಲ್ಲ. **'ಕಿಂತು ಭಕ್ತ್ಯನುಸಾರೇಣ ಫಲದೋಽತಃ ಸರ್ವಃ ಪ್ರಭುಃ'** ಎಂದಿರುವಂತೆ ಭಕ್ತಿಯ ಪರಿಮಾಣಕ್ಕನುಗುಣವಾಗಿ ಸ್ಪಂದಿಸುವ ಸಮತ್ವಗುಣದಿಂದ ಪರಿಪೂರ್ಣನಾಗಿರುವುದರಿಂದ ವೈಷಮ್ಯ ದೋಷ ಅವನಲ್ಲಿ ಇಲ್ಲ.... ಹೀಗೆ ಒಂದೊಂದು ಗುಣವೂ ಅದಕ್ಕೆ ವಿರುದ್ಧವಾದ ದೋಷದ ಅಭಾವವನ್ನು ಸಮರ್ಥಿಸಿಕೊಡಬಲ್ಲದು. ಈ ರೀತಿಯಾಗಿ ಅವನ ದೋಷದೂರತ್ವದ ಚಿಂತನೆಯನ್ನು ಗುಣಪೂರ್ಣತ್ವದ ಹಿನ್ನಲೆಯಲ್ಲಿ ನಡೆಸಬಹುದಾದಂತೆ, ಗಾಯತ್ರಿಯ **'ಭರ್ಗಃ'** ಶಬ್ದದಿಂದಲೂ ದೋಷದೂರತ್ವವನ್ನು ಚಿಂತಿಸಬಹುದಾಗಿದೆ.

**'ಭ್ರಸ್ಜ ಪಾಕೆ'** - ಎಂಬ ಧಾತುವಿನಿಂದ **ಭೃಜ್ಜತಿ- ಭಕ್ತಾನಾಂ ದೋಷಾನ್ ಪಚತಿ-** ಭಕ್ತರ ದೋಷಗಳನ್ನು ಸುಟ್ಟು ನಾಶಗೊಳಿಸುವನು ಎಂಬ ಅರ್ಥದಲ್ಲಿ ಗಾಯತ್ರಿಯ 'ಭರ್ಗಃ' ಶಬ್ದ ನಿಷ್ಪನ್ನವಾದುದೆಂದು ಇಟ್ಟುಕೊಂಡಲ್ಲಿ ಇನ್ನೊಬ್ಬರ ದೋಷಗಳನ್ನು

**ವೇದ-ಇತಿಹಾಸ-ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.**

ಪರಿಹರಿಸುವ ಭಗವಂತ ತನ್ನಲ್ಲಿ ಯಾಕೆ ಯಾವುದೇ ದೋಷ ಇರಲು ಅವಕಾಶ ನೀಡುವನು? ಎಂದು ಅವನಲ್ಲೂ ಯಾವುದೇ ದೋಷ ಇಲ್ಲ ಎಂದು ಸಿದ್ಧವಾಗಬಲ್ಲದು. ಹೀಗೆ ಭಗವಂತನ ಗುಣಪರಿಪೂರ್ಣತ್ವವನ್ನೂ ದೋಷದೂರತ್ವವನ್ನೂ ಗಾಯತ್ರಿಯ **'ತತ್', 'ವರೇಣ್ಯಂ', 'ಭರ್ಗಃ'**–ಶಬ್ದಗಳ ಮೂಲಕ ಸಮರ್ಥನೆ ಮಾಡಿ ಅದರಿಂದಾಗಿ ಅವನ ಸರ್ವೋತ್ತಮತ್ವನ್ನು ಧ್ಯಾನಿಸಬಹುದಾಗಿದೆ.

ಸಮುದ್ರಮಥನದ ಸಂದರ್ಭದಲ್ಲಿ ಸ್ವಯಂವರ ನಾಟಕದಲ್ಲಿ ತೊಡಗಿದ್ದ ಲಕ್ಷ್ಮೀದೇವಿ ಭಗವಂತನ ಗುಣಪೂರ್ಣತ್ವ, ದೋಷದೂರತ್ವಗಳ ಸಮರ್ಥನೆಯೊಂದಿಗೆ ಅವನ ಸರ್ವೋತ್ತಮತ್ವವನ್ನು ಹೇಗೆ ಸಾರಿರುವಳೋ ಹಾಗೆಯೇ **'ಅಭಿಮಾನಿನೀತು ಗಾಯತ್ರ್ಯಾಮುಖ್ಯಾಶ್ರೀಃ ಪರಿಕೀರ್ತಿತಾ'** ಎಂದು ಬೃಹದ್ಭಾಷ್ಯದಲ್ಲಿ (7–19–4) ತಿಳಿಸಿರುವಂತೆ ಗಾಯತ್ರಿಗೆ ಮುಖ್ಯಾಭಿಮಾನಿನಿಯಾಗಿರುವ ಲಕ್ಷ್ಮೀದೇವಿ ಗಾಯತ್ರಿಯ **'ತತ್', 'ವರೇಣ್ಯ', 'ಭರ್ಗಃ'** ಶಬ್ದಗಳ ಮೂಲಕ ಭಗವಂತನ ಗುಣಪೂರ್ಣತ್ವವನ್ನೂ ದೋಷದೂರತ್ವವನ್ನೂ ಸಮರ್ಥಿಸುವ ಮೂಲಕ ಅವನ ಸರ್ವೋತ್ತಮತ್ವವನ್ನು ಸಾರುತ್ತಿರುವಳೆಂದು ಚಿಂತಿಸಬಹುದಾಗಿದೆ. (ಮುಂದುವರಿಯುವುದು)

## ಶ್ರೀ ಶ್ರೀ ಸತ್ಯತೀರ್ಥರ ಮಠದಲ್ಲಿ ಸತ್ಯಾಮೃತ ಹೋಮ

ಭಂಡಾರಕೇರಿಮಠದ ಶ್ರೀವಿದ್ಯೇಶತೀರ್ಥರು 27–04–208ರಂದು ತಮ್ಮ ಭಂಡಾರಕೇರಿ ಮೂಲಮಠದಲ್ಲಿ ನಡೆದ ದ್ವಿತೀಯ ಸುಧಾಮಂಗಳ ಮಹೋತ್ಸವದ ಸಂದರ್ಭದಲ್ಲಿ ಮೊದಲ ದಿನ **ಶ್ರೀವಿದ್ಯಾಮಾನ್ಯ ವಿಶ್ವೇಶಭವನದ** ಉದ್ಘಾಟನೆ ನಡೆದಿದ್ದರೆ ಮರುದಿನ ಸತ್ಯಾಮೃತ ಎನಿಸುವ ಬ್ರಹ್ಮಸೂತ್ರಗಳ ಮಾಧ್ಯಮದಲ್ಲಿ ಸತ್ಯಾಮೃತ ಹೋಮ ನಡೆದಿತ್ತು. ಊರ ಹಾಗೂ ಪರವೂರ ಸುಮಾರು ಎಂಭತ್ತು ವಿದ್ವಾಂಸರ ಬೇರೆ ಬೇರೆ ವಿಷಯದ ಕುರಿತ ಪ್ರವಚನಗಳೂ, ಸರ್ವಮೂಲಗ್ರಂಥಗಳ ಪಾರಾಯಣಗಳೂ ನಡೆದಿದ್ದು, ಆ ಎಲ್ಲ ವಿದ್ವಾಂಸರಿಗೂ ಸುವರ್ಣದ ಉಂಗುರವನ್ನಿತ್ತು ಸಮ್ಮಾನಿಸಲಾಗಿತ್ತು.

ಸುಮಾರು ಆರುದಶಕಗಳ ಹಿಂದೆ ಶ್ರೀ ಶ್ರೀವಿದ್ಯಾಮಾನ್ಯತೀರ್ಥರ ಕುಲಪತಿತ್ವದಲ್ಲಿ ಆ ತಾಣದಲ್ಲೇ ಮೆರೆದಿದ್ದ ಗುರುಕುಲದ ವೈದಿಕವಾತಾವರಣ ಆ ಮೂರುದಿನಗಳಲ್ಲಿ ಮತ್ತೆ ವಿಜೃಂಭಿಸಿದಂತಿತ್ತು.

**ಮನೆಯ ಮುಂದೆ ಶ್ರೀ ತುಳಸಿಯ ವನ ಕಂಗೊಳಿಸುತ್ತಿರಲಿ**



**ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ.**

ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.



(8ನೇ ಪುಟದಿಂದ ಮುಂದುವರಿದುದು)

ಶಬ್ದ ಉದಾತ್ತವಾಗಿ ಕೊನೆಯ ಮೂರು ಶಬ್ದಗಳು ಅನುದಾತ್ತವಾಗಬಹುದು. ಹೀಗೆ ಮಾಡಿದಾಗ ಅವುಗಳ ಧ್ವನಿ ಬೇರೆಯಾಗಿ ಅದರ ಫಲವು ಸಹ ಬೇರೆ ಬೇರೆಯಾಗಿರುತ್ತದೆ. ಕೊನೆಯ ಶಬ್ದ ಉದಾತ್ತವಾದರೆ ಇಂದ್ರನನ್ನು ಕೊಲ್ಲುವ ಶತ್ರು ಹುಟ್ಟಲಿ ಎಂದು ಅರ್ಥ ಬರುತ್ತದೆ. ಮೊದಲನೆಯದ್ದು ಉದಾತ್ತವಾದರೆ ಇಂದ್ರನೇ ಶತ್ರುವಾಗಿ ಉಳ್ಳವ ಹುಟ್ಟುತ್ತಾನೆ. ಸರಿಯಾದ ಸ್ವರ ವರ್ಣಗಳನ್ನು ತಿಳಿದು ಮಾತಾಡಬೇಕು. ಲೌಕಿಕವಾಗಿ ಮಾತಾಡುವಾಗಲು ಸ್ವರ ಬೇರೆಯಾದರೆ ಅರ್ಥವೇ ಬೇರೆಯಾಗುತ್ತದೆ. ತಾವು ಮಹಾದಾನಿಗಳು ಎಂದರೆ ದಾನಿಗಳು ಅಲ್ಲ ಎಂದು ಅರ್ಥ. ತಾವು ಮಹಾಪಂಡಿತರು ಎಂದರೆ ವ್ಯತಿರಕ್ತ ಅಥವಾ ವ್ಯಂಗ್ಯ ಅರ್ಥವೇ ಉಂಟಾಗುತ್ತದೆ. ಮೊದಲು ಶಬ್ದ ಬ್ರಹ್ಮವನ್ನು ತಿಳಿಯಬೇಕು. ನಂತರ ಅರ್ಥ ಬ್ರಹ್ಮವನ್ನು ತಿಳಿಯಬೇಕು. ಶಬ್ದವನ್ನು ಬ್ರಹ್ಮ ಎಂದು ಯಾಕೆ ಹೇಳಿದರು? ಶಬ್ದಗಳು ಅನಂತ ಇವೆ. ಆದರೂ ಅದು ಬ್ರಹ್ಮ. ಶಬ್ದಕೋಶದಲ್ಲಿ ಇರುವಷ್ಟು ಶಬ್ದಗಳು ಮಾತ್ರ ಲೆಕ್ಕಕ್ಕೆ ಬರುವ ಶಬ್ದಗಳು ಎಂದು ತಿಳಿಯಬೇಡಿ. ಶಬ್ದಗಳು ಬಹಳ ಇವೆ. ಇದಕ್ಕೆ ಪತಂಜಲಿ ಒಂದು ವ್ಯಂಗ್ಯವಾದ ಉದಾಹರಣೆಯನ್ನು ಹೇಳಿ ತಮಾಷೆ ಮಾಡಿದ್ದಾನೆ. ಇಂದ್ರ ಸಹ ಬ್ರಹಸ್ಪತಿಯಲ್ಲಿ ಒಂದು ಸಹಸ್ರ ವರ್ಷ ಸತತ ಪಾಠ ಕೇಳಿದ್ದಾನೆ. ಒಂದು ವರ್ಷ ಎಂದರೆ ದೇವತೆಗಳ ಒಂದು ವರ್ಷ. ನಮ್ಮ ಒಂದು ವರ್ಷ ಎಂದರೆ ದೇವತೆಗಳ ಒಂದು ದಿನ. ಹೀಗೆ ನಮ್ಮ 365 ವರ್ಷಗಳೆಂದರೆ ದೇವತೆಗಳಿಗೆ ಒಂದು ವರ್ಷ. ಬ್ರಹಸ್ಪತಿ ಎಂಬುವವನು ದೇವತೆಗಳ ಗುರು. ಬಹಳ ಶ್ರೇಷ್ಟ. ಇಂದ್ರ ಎಂಬುವವನು ದೇವತೆಗಳ ರಾಜ. ನಾಲ್ಕು ವರ್ಷಗುರುಗಳ ಹತ್ತಿರ ಪಾಠ ಕೇಳಿ 5ನೇ ವರ್ಷದಿಂದಲೇ ಪಾಠ ಮಾಡುತ್ತೇನೆ ಎಂದು ಎಷ್ಟೋ ಜನರು ಹೇಳುವವರಿದ್ದಾರೆ. ಅವರು ಎಷ್ಟು ಚೆನ್ನಾಗಿ ಪಾಠ ಮಾಡಿಯಾರು? ವೇದಗಳು ಅನಂತ. ನಮಗೆ ಸಿಗದ ವೇದಗಳೇ ಜಾಸ್ತಿ. ಅಲ್ಲದೆ ಇನ್ನು ಕೆಲವು ವೇದಗಳು ಋಷಿಗಳಿಗೆ ದರ್ಶನವೇ ಆಗಿಲ್ಲ. ದರ್ಶನ ಆಗದ ವೇದದ ಮಂತ್ರಗಳು. ದರ್ಶನ ಆಗಿ ನಮಗೆ ಸಿಗದ ವೇದಮಂತ್ರಗಳು ಈಗ ಇರುವ ವೇದಮಂತ್ರಗಳಿಗಿಂತ ಅನಂತಪಟ್ಟು ಜಾಸ್ತಿಯೇ ಇದೆ. ಅವು ಅನಂತ. ಬರೇ ವೈದಿಕವಾದ ಶಬ್ದ ಬ್ರಹ್ಮನನ್ನು ತೆಗೆದುಕೊಂಡರೂ ಬಹಳ ಇದೆ. ಅರ್ಥ ಬ್ರಹ್ಮ ಎಂದರೆ ಭಗವಂತ. ಶಬ್ದಬ್ರಹ್ಮ ಎಂದರೆ ವೈದಿಕ ಸಾಹಿತ್ಯ. ಯಾರು ಶಬ್ದ ಬ್ರಹ್ಮನನ್ನುತಿಳಿದುಕೊಳ್ಳುತ್ತಾನೋ ಅವನು ಅರ್ಥಬ್ರಹ್ಮನನ್ನು ತಿಳಿದುಕೊಳ್ಳುತ್ತಾನೆ. ಆದಕಾರಣ ಭಗವಂತನನ್ನು ತಿಳಿಯುವಿದಕ್ಕೋಸ್ಕರ ಶಬ್ದ ಬ್ರಹ್ಮನನ್ನು ತಿಳಿದುಕೊಳ್ಳಬೇಕು.

**(ಮುಂದುವರಿಯುತ್ತದೆ)**

ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.

# ಯೋನಿ ಶಬ್ದದ ಬಳಕೆಯ ಔಚಿತ್ಯ

**ಅನುಗ್ರಹ–ಶ್ರೀ ವಿದ್ಯೇಶತೀರ್ಥರು** **ಸಂಗ್ರಹ–ಸಗ್ರಿ**

(ಭಂಡಾರಕೇರಿಮಠದ ಶ್ರೀವಿದ್ಯೇಶತೀರ್ಥರು 27–04–208ರಂದು ತಮ್ಮ ಭಂಡಾರಕೇರಿ ಮೂಲಮಠದಲ್ಲಿ ನಡೆದ ದ್ವಿತೀಯ ಸುಧಾಮಂಗಳ ಮಹೋತ್ಸವದಲ್ಲಿ ಪ್ರಸ್ತುತಪಡಿಸಿದ ಸುಧಾನುವಾದದಲ್ಲಿ ಮಿಂಚಿದ ಒಂದು ಪ್ರಮೇಯ.)

**'ಶಾಸ್ತ್ರಯೋನಿತ್ವಾತ್'**–ಎಂಬ ಬ್ರಹ್ಮಸೂತ್ರದಲ್ಲಿ ಜ್ಞಪ್ತಿಗೆ ಕಾರಣ ಎಂಬ ಅರ್ಥದಲ್ಲಿ ಯೋನಿಶಬ್ದವನ್ನು ಬಳಸಲಾಗಿದೆ ಎನ್ನುವಾಗ ಸಹಜವಾಗಿ ಏಳಬಹುದಾದ ಸಂದೇಹ ಹಾಗಾದರೆ ಜ್ಞಪ್ತಿಯ ಕಾರಣದ ವಾಚಕವಾಗಿ ಪ್ರಸಿದ್ಧವಾಗಿರುವ ಮಾನ ಇತ್ಯಾದಿ ಶಬ್ದಗಳನ್ನು ಬಿಟ್ಟು ಜ್ಞಪ್ತಿಕಾರಣ ಎಂಬುದನ್ನು ಸ್ಪಷ್ಟವಾಗಿ ತಿಳಿಸದೆ 'ಯೋನಿ' ಶಬ್ದವನ್ನು ಯಾಕೆ ಬಳಸಬೇಕಿತ್ತು?

ಇದಕ್ಕೆ ನಮಗೆ ತೋಚಿರುವ ಸಮಾಧಾನ– **'ಯೋನಿಶ್ಚ ಗೀಯತೇ'** – ಎಂಬ ಬ್ರಹ್ಮಸೂತ್ರದಲ್ಲಿ ಸಿದ್ಧಾಂತಿಸಿರುವಂತೆ ವ್ಯವಧಾನವಿಲ್ಲದೆ ಉತ್ಪತ್ತಿದ್ವಾರತ್ವವನ್ನು ಯೋನಿ ಶಬ್ದ ಸೂಚಿಸುವುದು. ಇದೇ ನ್ಯಾಯದಿಂದ ಯೋನಿಶಬ್ದ ಅವ್ಯವಧಾನೇನ ಜ್ಞಪ್ತಿದ್ವಾರತ್ವವನ್ನೂ ಸೂಚಿಸಿಕೊಡಬಲ್ಲದು. ಇದರಿಂದಾಗಿ ಅದ್ವೈತಿಗಳು ವೇದಕ್ಕೆ ಸಂಬಂಧಿಸಿದಂತೆ ಪ್ರಸ್ತುತಪಡಿಸುವ ಅಖಂಡಾರ್ಥ ವಾದವನ್ನು ಅಲ್ಲಗಳೆದಂತಾಗುವುದು. ಯಾಕೆಂದರೆ ಆ ಅಖಂಡಾರ್ಥವಾದದ ಪ್ರಕಾರ ವೇದದ ಮಾತುಗಳಿಗೆ ಪದಾರ್ಥಪರವಾದ ಹಾಗೂ ವಾಕ್ಯಾರ್ಥ ಪರವಾದ ಎರಡು ಪ್ರವೃತ್ತಿಗಳು. ಆದುದರಿಂದ ಪದಾರ್ಥ ಪರಪ್ರವೃತ್ತಿಯನ್ನು ಮಾಧ್ಯಮವನ್ನಾಗಿಟ್ಟುಕೊಂಡು ವೇದದ ಮಾತುಗಳು ವಾಕ್ಯಾರ್ಥಪರ ಪ್ರವೃತ್ತಿವುಳ್ಳವುಗಳೆಂದು ಹೇಳಲಾಗುವುದು. ಹೀಗೆ ಹೇಳಿದಲ್ಲಿ ವೇದದ ಮಾತುಗಳು ಪದಾರ್ಥ ಪ್ರವೃತ್ತಿಯ ವ್ಯವಧಾನವನ್ನಿಟ್ಟುಕೊಂಡು ವಾಕ್ಯಾರ್ಥರೂಪದಲ್ಲಿ ಪರಬ್ರಹ್ಮನನ್ನು ಪ್ರತಿಪಾದಿಸುವವುಗಳೆಂದು ಹೇಳಿದಂತಾಗುವುದು. ಈ ರೀತಿಯಾದ ವ್ಯವಧಾನದಿಂದ ಬ್ರಹ್ಮಪ್ರತಿಪಾದತ್ವ ವೇದಮಾತುಗಳಿಗೆ ಸರಿಯಲ್ಲ. ಬದಲಾಗಿ ಪದಾರ್ಥಪರಪ್ರವೃತ್ತಿ ಇತ್ಯಾದಿ ಯಾವುದೇ ವ್ಯವಧಾನ ಇಲ್ಲದೆ ನೇರವಾಗಿ ಬ್ರಹ್ಮಪ್ರತಿಪಾದಕತ್ವ ವೇದಮಾತುಗಳಿಗೆ ಇರುವುದೆಂದು



ಅವ್ಯವಧಾನೇನ ಜ್ಞಪ್ತಿಕಾರಣತ್ವ ಎಂಬ ಅರ್ಥವನ್ನು ಹೊರಡಿಸುವ ಯೋನಿಶಬ್ದವು ಸೂಚ್ಯವಾಗಿ ಸಾರಬಲ್ಲದು.

ತಂತ್ರನಿರುಕ್ತ (ಭಾಗ ತಾ. ನಿ. 5–7–13) ತ್ರಯೀ ಎನಿಸುವ ವೇದದಿಂದ ಸ್ತುತ್ಯನಾದ ಭಗವಂತನನ್ನು 'ತ್ರಯೀಸುತ'–ತ್ರಯೀಡ್ಯತ್ವಾತ್ ತ್ರಯೀಸುತಃ' ಎಂದು ಸಾರುತ್ತಿದ್ದು ಭಗವಂತನಿಗೆ ಈ ಬಗೆಯ ತ್ರಯೀಸುತತ್ವ ನೇರವಾದದ್ದೇ ಹೊರತು ಮತ್ತೊಬ್ಬರ ಮಾಧ್ಯಮದ ಮೂಲಕವಾದದ್ದಲ್ಲ ಎಂಬುದನ್ನು ಶಾಸ್ತ್ರಯೋನಿತ್ವಾತ್ ಸೂತ್ರದ ಯೋನಿಶಬ್ದ ಸ್ಪಷ್ಟಪಡಿಸಬಲ್ಲದು. ★

**ಪರಮಪೂಜ್ಯ ಶ್ರೀಪಲಿಮಾರು ಮಠದ**

**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರ ದಿವ್ಯೋಪಸ್ಥಿತಿಯಲ್ಲಿ**

**ಪೂರ್ವ–ಪಶ್ಚಿಮ–ಉತ್ತರ ಭಾರತ ತೀರ್ಥಕ್ಷೇತ್ರ ಪ್ರವಾಸ**

**ಜೂನ್ 9ರಿಂದ ಜುಲೈ 9 2008ರತನಕ (30 ದಿನಗಳು)**

ಸೀಟು 1ಕ್ಕೆ ಏರ್–ಹೈಟೆಕ್ ಲಕ್ಸುರೀ ಬಸ್ಸಿನಲ್ಲಿ ರೂ. 18,000/–

ಇಂದೇ ಅಡ್ವಾನ್ಸ್ 5 ಸಾವಿರ ಕೊಟ್ಟು ತಮ್ಮ ಸೀಟುಗಳನ್ನು ಕಾದಿರಿಸಿರಿ

(ಊಟ, ವಸತಿ ಎಲ್ಲಾ ಸೇರಿ)

ಪ್ರತಿನಿತ್ಯ ಆಯಾಯ ಕ್ಷೇತ್ರದ ಮಹಾತ್ಮೆಯನ್ನು ಶ್ರೀಗಳು ಪ್ರವಚನ ಮಾಡುತ್ತಾರೆ.

**ಸಂದರ್ಶಿಸುವ ಸ್ಥಳಗಳು:** ಸೋದೆ, ಕೊಲ್ಲಾಪುರ, ಪಂಢರಾಪುರ, ನಾಸಿಕ, ನರ್ಮದಾ, ಪ್ರಭಾಸ, ಸೋಮನಾಥ, ದ್ವಾರಕಾ, ಭೇಟ್‌ದ್ವಾರಕಾ, ಮಾತೃಗಯಾ, ಪುಷ್ಕರ, ವೃಂದಾವನ, ದೆಹಲಿ, ಕುರುಕ್ಷೇತ್ರ, ಹರಿದ್ವಾರಾ, ಋಷಿಕೇಶ, ಬದರಿನಾಥ, ನೈಮಿಷಾರಣ್ಯ, ಅಯೋಧ್ಯಾ, ಪ್ರಯಾಗ, ಕಾಶಿ, ಗಯಾ, ಪುರೀ, ಕೊನಾರ್ಕ್, ಭುವನೇಶ್ವರ, ಸಿಂಹಾಚಲ, ವಿಜಯವಾಡ, ಮಂಗಳಗಿರಿ, ತಿರುಪತಿ ಇನ್ನು ಹಲವು ಕ್ಷೇತ್ರಗಳು.

**ಹೆಚ್ಚಿನ ವಿವರಗಳಿಗೆ–**

**ಎ.ಆರ್. ತಂತ್ರಿ, ಬೆಂಗಳೂರು**
**ಮೊಬೈಲ್: 9448073119**
**ರಂಗನಾಥ ದಿಗ್ಗಾವಿ, ಬೆಳಗಾಂ**
**ಮೊಬೈಲ್ : 9448506017**

**ಬಿ. ಮಧುಸೂದನ ಆಚಾರ್ಯ**
**ಪಲಿಮಾರು ಮಠ, ಉಡುಪಿ–576 101**
**ಫೋನ್: 2534960 (0)2542425(R)**
**ಮೊಬೈಲ್ : 9448607425**

# ಶ್ರೀನಾರಾಯಣವರ್ಮದ ಹಿನ್ನೆಲೆ

ಬೆ. ನಾ. ವಿಜಯೀಂದ್ರಾಚಾರ್ಯ ಮೈಸೂರು

ಒಮ್ಮೆ ತ್ರೈಲೋಕ್ಯಾಧಿಪತಿಯಾದ ದೇವೇಂದ್ರನು ತನ್ನ ವೈಭವದ ಸಭಾಮಂಟಪದಲ್ಲಿ ಮಂಡಿಸಿದ್ದಾಗ ಪರಮಪೂಜ್ಯರೂ ದೇವಗುರುಗಳೂ ಆದ ಬೃಹಸ್ಪತ್ಯಾಚಾರ್ಯರು ಅಲ್ಲಿಗೆ ಆಗಮಿಸಿದರು. ಐಶ್ವರ್ಯ ಅಧಿಕಾರದ ಮದದಿಂದ ಕುರುಡನಾದ ದೇವೇಂದ್ರನು ಗುರುಗಳನ್ನು ಎದ್ದು ಗೌರವಿಸಲಿಲ್ಲ. ಬೃಹಸ್ಪತಿಗಳು ಮನ್ನಣೆಯಿಲ್ಲದ ದೇವೇಂದ್ರನಿತ್ತ ಮಣೆ ಬೇಡವೆಂದು ಸಿಡಿಮಿಡಿಗೊಂಡು ಸಭಾತ್ಯಾಗಮಾಡಿ ಹೋದರು. ಬೃಹಸ್ಪತ್ಯಾಚಾರ್ಯರು ಯೋಗ್ಯತೆಯಲ್ಲಿ ದೇವೇಂದ್ರನಿಗಿಂತಲೂ ಕಡಿಮೆಯ ಸ್ಥಾನದಲ್ಲಿದ್ದರೂ ಇಂದ್ರನು ಗುರುವಿನ ಸ್ಥಾನಕ್ಕೆ ಮರ್ಯಾದೆ ನೀಡಬೇಕಿತ್ತು. ಈ ಯಥಾರ್ಥ ಅರಿವು ದೇವೇಂದ್ರನಿಗೆ ಮೂಡುವುದರೊಳಗೆ ಬೃಹಸ್ಪತಿಗಳು ದೌಡಾಯಿಸಿದ್ದರು. ಎಚ್ಚೆತ್ತ ದೇವೇಂದ್ರ ಪಶ್ಚಾತ್ತಾಪ ಬುದ್ಧಿಯಿಂದ ಕ್ಷಮೆಯಾಚಿಸಲು ಆಚಾರ್ಯರ ಬಳಿ ಬಂದ. ಬೃಹಸ್ಪತಿಗಳು ಇಂದ್ರ ಬಂದನೆಂದು ನೋಡ ಬಯಸದೆ ಯೋಗ ಸಾಮರ್ಥ್ಯದಿಂದ ಅದೃಶ್ಯರಾದರು. ಇಂದ್ರನು ದುಃಖತಪ್ತನಾದನು.

ಇತ್ತ ದೇವಗುರುವಿನ ಅವಗ್ರಹವನ್ನರಿತ ದೈತ್ಯರು ಶುಕ್ರಾಚಾರ್ಯರ ಪ್ರೇರಣೆಯಂತೆ ಅಮರಾವತಿಗೆ ಲಗ್ಗೆ ಇಟ್ಟರು. ದೇವದೈತ್ಯರ ಕಾಳಗದಲ್ಲಿ ದೈತ್ಯರ ಕೈ ಮೇಲಾಯಿತು. ನೊಂದ ದೇವತಾವೃಂದ ದೇವೇಂದ್ರನನ್ನು ಮುಂದಿರಿಸಿಕೊಂಡು ಹರಿನಂದನನ ಬಳಿಬಂದರು.

ಬ್ರಹ್ಮದೇವರಾದರೂ ಪುರಂದರಾದಿಗಳಿಗೆ ಗುರು ಅವಹೇಳನದ ಅನರ್ಥವನ್ನು ತಿಳಿಹೇಳಿದನು. "ತಪ್ಪೆಸಗಿದ ಬಳಿಕ ದುಃಖ ಉಣ್ಣಲೇ– ಬೇಕು. ದೇವತೆಗಳಿರಾ! ಈ ಪಾಪದ ಫಲ ಅನುಭವಿಸಿಯೇ ತೀರಬೇಕು. ಬ್ರಾಹ್ಮಣ – ಗೋವು – ಭಗವಂತ – ಭಕ್ತರುಗಳನ್ನು ತಿರಸ್ಕರಿಸಿದವರಿಗೆ ಎಂದಿಗೂ ಕೇಡು ತಪ್ಪದು. ಆದುದರಿಂದ ಸ್ವಲ್ಪಸಮಯ ತಾಳ್ಮೆಯಿಂದ ವರ್ತಿಸಿರಿ.

ಸದ್ಯಕ್ಕೆ ಅದಿತಿ ಸುತರಲ್ಲಿ ಒಬ್ಬರಾದ ತ್ವಷ್ಟೃಪ್ರಜಾಪತಿಯ ಸುತನಾದ ವಿಶ್ವರೂಪ ಬ್ರಾಹ್ಮಣನ ಬಳಿ ಸಾಗಿರಿ. ಆತ ಮಹಾತಪಸ್ವಿ, ಜಿತೇಂದ್ರಿಯ– ನಿದ್ದಾನೆ. ಅವನನ್ನೇ ಕುಲಪುರೋಹಿತನನ್ನಾಗಿ ಸ್ವೀಕರಿಸಿರಿ" ಎಂದು ಸಾಂತ್ವನ ಹೇಳಿ ಕಳುಹಿಸಿದರು. ಬ್ರಹ್ಮದೇವರ ಮಾತಿನಂತೆ ದೇವತೆಗಳು ವಿಶ್ವರೂಪಾಚಾರ್ಯರ ಬಳಿಗೆ ತೆರಳಿ ಗುರುತ್ವವನ್ನು ಸ್ವೀಕರಿಸಿರೆಂದು



ಪ್ರಾರ್ಥಿಸಿದರು. ವಿಶ್ವರೂಪಾಚಾ0ರ್ಯ ರು ಮೊದಲು ಬೇಡವೆಂದರೂ ಮತ್ತೆ ಒಪ್ಪಿದರು. "ನಿಮ್ಮ ಕೋರಿಕೆಯನ್ನು ನನ್ನ ಸಮಸ್ತ ಧರ್ಮಗಳಿಂದಲೂ ಕೊನೆಗೆ ನನ್ನ ಪ್ರಾಣಗಳಿಂದಲೂ ಸಾಧಿಸಿ ಕೊಡುವೆ" ಎಂದು ಭರವಸೆ ಇತ್ತರು. ಅದರಂತೆ ದೇವತೆಗಳ ಕಾರ್ಯಗಳನ್ನು ಬಹಳ ಶ್ರದ್ಧೆಯಿಂದ ಪೂರೈಸುತ್ತಿದ್ದರು. ವಿಶ್ವರೂಪಾಚಾರ್ಯರ ಮಂತ್ರಬಲದಿಂದ ದೇವೇಂದ್ರ ಪುನಃ ಸಂಪದ್ಭರಿತನಾದನು. ಶುಕ್ರಾಚಾರ್ಯರ ನೀತಿ ಚಾತುರ್ಯಗಳಿಂದ ದೈತ್ಯರ ಸಂಪತ್ತು ಸ್ಥಿರವಾಗಿದ್ದರೂ ವಿಶ್ವರೂಪರು "ಶ್ರೀ ನಾರಾಯಣ ವರ್ಮ"ವೆಂಬ ಮಂತ್ರಬಲದಿಂದ ಅದನ್ನಾಕರ್ಷಿಸಿ ದೇವೇಂದ್ರನಿಗೆ ಉಪದೇಶಿಸಿದರು. ಅದರ ಸಿದ್ಧಿಯಿಂದ ಶತಕ್ರತುವು ಅಸುರಸೈನ್ಯವೆಲ್ಲವನ್ನೂ ದಮನಮಾಡಿ ಸ್ವರ್ಗಸಾಮ್ರಾಜ್ಯವನ್ನು ಅನುಭವಿಸುವಂತಾದನು.

ಯದ್ಯಪಿ ಈ ನಾರಾಯಣವರ್ಮದ ಉಪದೇಶ ದೇವೇಂದ್ರನಿಗೆ ಮೊದಲೇ ಇತ್ತು. ಕಾಲಿಕವಾಗಿ ಮಂತ್ರದ ತೇಜಸ್ಸು ಕ್ಷೀಣವಾದಾಗ ಪುನಃ ವಿಶ್ವರೂಪಾಚಾರ್ಯರಿಂದ ಉಪದೇಶ ಪಡೆದ. ಹಿಂದೆ ದಧೀಚಿ ಋಷಿಗಳಿಗೆ ದೇವೇಂದ್ರನೇ ಈ ಮಂತ್ರವನ್ನು ಉಪದೇಶಿಸಿದ್ದ. ಉಪದೇಶಿಸುವಾಗ 'ಈ ಮಂತ್ರವು ಅತ್ಯಂತ ಗೋಪ್ಯವಾದುದು. ಯಾರಿಗೂ ಉಪದೇಶಿಸಬಾರದು. ನಿಮ್ಮಲ್ಲೇ ಇರಬೇಕು' ಎಂದು ಆದೇಶಿಸಿದ್ದ. ದಧೀಚಿಗಳು ಇದಕ್ಕೆ ಒಪ್ಪಿದ್ದರು. ಹೀಗಿರಲು ದಧೀಚಿಗಳ ಬಳಿಗೆ ಅಶ್ವಿನೀದೇವತೆಗಳೊಮ್ಮೆ ಬಂದು ಜಗತ್ತಿನ ವೈದ್ಯರಾದ ತಮಗೆ ನಾರಾಯಣವರ್ಮವೆಂಬ ದಿವ್ಯೌಷಧ ಬೇಕೆಂದು ಅಂಗಲಾಚಿದರು. ಎಲ್ಲ ರೋಗಗಳಿಗೂ ಚಿಕಿತ್ಸೆನೀಡಬಲ್ಲ ಔಷಧಿ 'ನಾರಾಯಣ ವರ್ಮ' ಒಂದೇ ಎಂದು ಮನಗಂಡಿದ್ದರು. ಹೀಗಾಗಿ ದಧೀಚಿಗಳ ಬಳಿ ದುಂಬಾಲುಬಿದ್ದರು.

ಆದರೆ ದಧೀಚಿಗಳು ಧೈರ್ಯದಿಂದ ಉಪದೇಶಿಸಲು ಮುಂದಾಗಲಿಲ್ಲ. "ದೇವತೆಗಳೇ! ನಾರಾಯಣವರ್ಮದ ಉಪದೇಶ ಮಾಡಿದಲ್ಲಿ ನನ್ನ ತಲೆಯೇ ಹಾರಿ ಹೋಗುವ ಅಪಾಯವಿದೆ. ಇಂದ್ರನು ಯಾರಿಗೂ ಇದನ್ನು ಉಪದೇಶಿಸಬಾರದೆಂದು ಎಚ್ಚರಿಸಿದ್ದಾನೆ." ಎಂದರು.

ಇದಕ್ಕೆ ಪ್ರತಿಯಾಗಿ ಅಶ್ವಿನೀದೇವತೆಗಳು ಯುಕ್ತಿಬದ್ಧವಾಗಿ ಉತ್ತರಿಸಿದರು. "ಋಷಿಗಳೇ! ನಾವು ವೈದ್ಯರು. ಶಸ್ತ್ರ ಚಿಕಿತ್ಸೆಯನ್ನು ಬಲ್ಲವರಾಗಿದ್ದೇವೆ. ಶಸ್ತ್ರಚಿಕಿತ್ಸೆಯ ಮೂಲಕ ನಿಮ್ಮ ತಲೆಯನ್ನು ತೆಗೆಯುವೆವು. ತಲೆಯ ಸ್ಥಾನದಲ್ಲಿ ಕುದುರೆಯ ತಲೆಯನ್ನು ಜೋಡಿಸುವೆವು. ಆ ಕುದುರೆಯ ಶಿರದಿಂದ ಉಪದೇಶಿಸಿರಿ. ದೇವೇಂದ್ರನು ಆ ಹಯದ ಶಿರವನ್ನು ತರಿದ ಬಳಿಕ ನಿಮ್ಮ ತಲೆಯನ್ನು ಜೋಡಿಸುವೆವು" ಎಂದರು.

ದೇವತೆಗಳ ಯುಕ್ತಿಬದ್ಧಚಿಂತನೆಗೆ ಸಿಕ್ಕಿಬಿದ್ದ ದಧೀಚಿ ಋಷಿಗಳು ಆಗಲೆಂದು ಅನುಮತಿ ಇತ್ತರು. ಅಶ್ವಿನೀದೇವತೆಗಳು ಸಂಯೋಜಿಸಿದ ಕುದುರೆ ಮುಖದಿಂದ ನಾರಾಯಣವರ್ಮವನ್ನು ಅಶ್ವಿನೀದೇವತೆಗಳಿಗೆ ಉಪದೇಶಿಸಿದರು. ಅಂತೂ ಹಯಗ್ರೀವನ ಪವಿತ್ರವಾದ ವದನದಿಂದ

ಹೊರಹೊಮ್ಮಿದ ಅಭಯಮಂತ್ರಗೀತೆಯೇ ಈ ನಾರಾಯಣವರ್ಮ.

ಇತ್ತ ಇಂದ್ರ ಬಂದ. ದಧೀಚಿಗಳ ಹಯಶಿರವ ಕೊಂದ. ನಂತರ ಅಶ್ವಿನಿಗಳು ದಧೀಚಿಗಳ ಪೂರ್ವಶಿರವನ್ನು ಸಂಧಾನವಮಾಡಿದರು. ಹೀಗೆ ಈ ಮಂತ್ರದ ಇತಿಹಾಸ ರೋಮಾಂಚಕಾರಿಯಾಗಿದೆ. ಪಾಪ ಸಂಚಯದ ಮುಂಚೂಣಿಯಲ್ಲಿರುವ ಪ್ರಪಂಚದ ಕಕುಲತೆಯನ್ನು ಕಿತ್ತೊಗೆವ ಪ್ರಚಂಡಮಾರ್ತಾಂಡವೆನಿಸಿದೆ. ಸಜ್ಜನರಿಗೆ ಹೆಜ್ಜೆ ಹೆಜ್ಜೆಗೆ ಒದಗಿ ಬರುವ ಕುತ್ತುಗಳನ್ನು ಕಿತ್ತೊಗೆವ ಬಿರುಸಿನಮಂತ್ರವೆಂದೆನೆಸಿದೆ. ಇಂದು ಮನುಷ್ಯರಿಗೆ ಯಾಂತ್ರಿಕ ಯುಗದಲ್ಲಿ ಬಂದೊದಗುವ ಆಪತ್ತುಗಳು ನೂರಾರು. ಭೂತ ಪ್ರೇತ-ಪಿಶಾಚಿಗಳಿಗಿಂತಲೂ ಭಯಂಕರವಾಗಿ ಅಡವರಿಸಿಕೊಳ್ಳುವ ವ್ಯಾಧಿಗಳಸರಮಾಲೆಯೇ ಎದುರಾಗಿವೆ. ಪ್ರಪಂಚದ ಅಸ್ತಿತ್ವವನ್ನೇ ಛಿದ್ರ ವಿಚ್ಛಿದ್ರಗೊಳಿಸುವ ಉಗ್ರರ ತಾಣಗಳು, ಉಗ್ರಾಣಗಳಿಗಿಂತ ಅಧಿಕವಾಗಿವೆ. ಕಾಡಿನ ವನಚರ ಪ್ರಾಣಿಗಳಿಗಿಂತ ನಾಡಿನ ಸಂಚಾರೀವಾಹನಗಳೇ ಭಯಂಕರವಾಗಿವೆ. ಹೀಗೆ ಸ್ವತಃ ಮನುಷ್ಯನೇ ನಿರ್ಮಿಸಿಕೊಂಡಿರುವ ಆಪತ್ತುಗಳು ನೂರಾರು ಎದುರಾಗುತ್ತಿದ್ದರೆ; ಮನುಷ್ಯನ ಪ್ರಯತ್ನವನ್ನು ಮೀರಿನಿಂತ ಆಪತ್ತುಗಳ ಸಂಖ್ಯೆಯೂ ಅಪಾರವಾಗಿಯೇ ಇದೆ. "**ದೈವಾಧೀನಂ ಜಗತ್ಸರ್ವಂ**" ಎಂಬಂತೆ ಸಮಗ್ರ ಪ್ರಪಂಚವೇ ದೈವಾಧೀನವಾಗಿದೆ.

ಗಂಭೀರವಾಗಿ ಆರ್ಭಟಿಸುವ ಸಮುದ್ರ ಇದ್ದಕ್ಕಿದ್ದಂತೆ ತ್ಸುನಾಮಿಯಂತಹ ಭಯಂಕರರೂಪವನ್ನು ತಾಳಿದರೆ; ಹಾರಾಡುವ ಭಾರೀ ವಿಮಾನಗಳೇ ಭಯಂಕರ ಸ್ಫೋಟಕಗಳಾಗಿ ಸ್ವಚ್ಛಪ್ರಕೃತಿಯನ್ನು ಮೃತ್ಯುಕೂಪಕ್ಕೆ ಸೆಳೆಯುವುಗಳಾಗಿವೆ. ಚಂಡಮಾರುತ – ಅತಿವೃಷ್ಟಿ – ಸಿಡಿಲುಬಡಿತ ಮುಂತಾದ ನೂರಾರು ದೈವಿಕವಾದ ಆಪತ್ತಿನ ಕುತ್ತುಗಳಿಗಿಂತಲೂ ಮಿಗಿಲಾಗಿ ಪ್ರತಿನಿತ್ಯ ಮೃತ್ಯುವಿನ ದವಡೆಗೆ ಅಸಾಹಯಕವಾಗಿ ಸಾಗುತ್ತಿರುವ ಜೀವನು ಭಯಂಕರ ಭಯದ ತಗ್ಗು-ಮಿಟ್ಟೆಗಳಲ್ಲಿ ತೊಳಲಾಡಿ ನರಕವನ್ನು ಸೃಷ್ಟಿಸಿಕೊಂಡಿದ್ದಾನೆ. ಇಂತಹ ಘೋರಭಯಗಳಿಗೆ ಯಾವ ಚಿಕಿತ್ಸಾಲಯಗಳು ನೆರವಾಗವು. ದೈವಿಕವಾಗಿ ಒದಗುವ ಈ ಭಯಗಳಿಗಿರುವ ಚಿಕಿತ್ಸೆ ಎಂದರೆ "**ಮಂತ್ರಾಧೀನಂ ತು ದೈವತಂ**" ಎಂಬಂತೆ ಭಗವನ್ಮಂತ್ರಗಳ ಶರಣಾಗತಿ ಒಂದೇ ಆಸರೆಯಾಗಿದೆ. ಎಂತಹ ಭಯಗಳನ್ನೂ ಪರಿಹರಿಸಬಲ್ಲ ಶಕ್ತಿ ಹರಿಮಂತ್ರಗಳಿಗಿದೆ.

"**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್**" ಎಂದು ಸ್ವತಃ ಶ್ರೀಕೃಷ್ಣನೇ ಮಂತ್ರಗಳಿಗೆ ಭವಭಯವನ್ನೇ ಪರಿಹರಿಸುವ ಸಾಮರ್ಥ್ಯವಿದೆ ಎಂದು ಅಭಯದಾನ ಮಾಡಿದ್ದಾನೆ. ಅಂತಹ ಮಂತ್ರಗಳ ಯಾದಿಯಲ್ಲಿ ದೇವಲೋಕದ ಒಡೆಯನಾದ ದೇವೇಂದ್ರನ ಭಯದ ಜತೆಗೆ ಸಮಸ್ತದೇವತಾಗಣದ ಛಳಿಯನ್ನೇ ಬಿಡಿಸಿದ ಮಹಾಮಂತ್ರ "**ನಾರಾಯಣ ವರ್ಮ**". ★

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.



# ವಿದ್ಯೆ
## (ವಿದುರನು ಕಂಡಂತೆ)

**ತಿರುಮಲಾಚಾರ್ಯ ಕುಲಕರ್ಣಿ, ಬೆಂಗಳೂರು**

ವಿದುರನೀತಿ ಮಹಾಭಾರತದ ಅತಿಪ್ರಮುಖ ಘಟ್ಟಗಳಲ್ಲಿ ಒಂದು. ಇದು ಉದ್ಯೋಗಪರ್ವದಲ್ಲಿ ಬರುವ ಉಪದೇಶ. ತನ್ನ ಮಕ್ಕಳಿಗೂ ತಮ್ಮ ಪಾಂಡುವಿನ ಮಕ್ಕಳಿಗೂ ನಡೆಯುತ್ತಿರುವ ತಿಕ್ಕಾಟದ ಸಂದರ್ಭದಲ್ಲಿ ಗೊಂದಲದಲ್ಲಿ ಬಿದ್ದ ಧೃತರಾಷ್ಟ್ರನು ಸಲಹೆಗಾಗಿ ಮುತ್ಸದ್ದಿ ವಿದುರನನ್ನು ಕರೆಸುತ್ತಾನೆ. ಆಗ ವಿದುರನು ಮಾಡುವ ಉಪದೇಶವನ್ನು ವಿದುರನೀತಿ ಎನ್ನಲಾಗುವುದು. ಇದು ಉದ್ಯೋಗಪರ್ವದಲ್ಲಿ ಎಂಟು ಅಧ್ಯಾಯಗಳಷ್ಟು ವಿಸ್ತಾರವಾಗಿ ಹರಡಿಕೊಂಡಿದೆ. ವಿದುರನೀತಿಯಲ್ಲಿ ಪ್ರಸಂಗಾನುಪ್ರಸಂಗವಾಗಿ ಬಹಳಷ್ಟು ವಿಷಯಗಳು ಪ್ರಸಕ್ತವಾಗಿದ್ದು ಅವುಗಳಲ್ಲಿ ವಿದ್ಯೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಸಂಗ್ರಹಿಸಲಾಗಿದೆ. ಈ ತರಹದ ವಿಷಯಗಳು ಮನನ ಮಾಡಿದಷ್ಟೂ ಹೆಚ್ಚು ಮನವರಿಕೆ ಆಗುವಂಥವು, ಹೆಚ್ಚಿನ ಆನಂದ ನೀಡುವಂಥವು.

ವಿದ್ಯೆಯ ಲಕ್ಷಣಗಳು:–

**ಅರ್ಥಂ ಮಹಾಂತಮಾಸಾದ್ಯ ವಿದ್ಯಾಮೈಶ್ವರ್ಯಮೇವ ವಾ ।**

**ವಿಚರತ್ಯಸಮುನ್ನದ್ಧೋ ಯಃ ಸ ಪಂಡಿತ ಉಚ್ಯತೇ ॥** (ಅ.33 ಶ್ಲೋ.39)

‘ಹೆಚ್ಚಿನ ಸಂಪತ್ತು, ವಿದ್ಯೆ ಅಥವಾ ಅಧಿಕಾರವನ್ನು ಪಡೆದು ಗರ್ವಿಷ್ಠನಾಗದವನೇ ನಿಜವಾದ ಪಂಡಿತ’

**ಯ ಆತ್ಮನಾಪತ್ರಪತೇ ಭೃಶಂ ನರಃ; ಸ ಸರ್ವಲೋಕಸ್ಯ ಗುರುರ್ಭವತ್ಯುತ ।** (ಅ.33 ಶ್ಲೋ.102)

‘ಯಾರು ತನ್ನ ಬಗ್ಗೆ ತಾನು ಲಜ್ಜೆಪಡುವನೊ ಅವನು ಉಳಿದವರಿಗೆಲ್ಲ ಉಪದೇಶಕನಾಗಬಲ್ಲ.’

ವಿದ್ಯೆಯ ಕಾರಣಗಳು:–

**ಸತ್ಯಂ ರೂಪಂ ಶ್ರುತಂ ವಿದ್ಯಾ ಕೌಲ್ಯಂ ಶೀಲಂ ಬಲಂ ಧನಮ್ ।**

**ಶೌರ್ಯಂ ಚ ಚಿತ್ರಭಾಷ್ಯಂ ಚ ದಶ ಸಂಸರ್ಗಯೋನಯಃ ॥**(ಅ.35 ಶ್ಲೋ.50)

‘ಈ ಹತ್ತು ಗುಣಗಳು ಸಂಪರ್ಕದಿಂದ ಬರುತ್ತವೆ – ಸತ್ಯ, ರೂಪ, ಶ್ರವಣ, ವಿದ್ಯೆ,

ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.

ಕುಲೀನತೆ, ನಡತೆ, ಶಕ್ತಿ, ಹಣ, ಪರಾಕ್ರಮ ಮತ್ತು ಆಕರ್ಷಕ ಮಾತು. (ಆದ್ದರಿಂದ ಒಳ್ಳೆಯ ಗುಣಸಂಪನ್ನರ ಸಂಪರ್ಕವನ್ನು ಬೆಳೆಸಬೇಕು.)'

ವಿದ್ಯಾವಂತರಿಗೆ ಎಚ್ಚರಿಕೆ:–

**ಏಕಂ ಹನ್ಯಾನ್ನ ವಾ ಹನ್ಯಾದಿಷುರ್ಮುಕ್ತೋ ಧನುಷ್ಮತಾ ।**

**ಬುದ್ಧಿರ್ಬುದ್ಧಿಮತೋತ್ಸೃಷ್ಟಾ ಹನ್ಯಾದ್ರಾಷ್ಟ್ರಂ ಸರಾಜಕಮ್** ॥(ಅ.33 ಶ್ಲೋ.42)

'ಆಯುಧವೊಂದನ್ನು ಪ್ರಯೋಗಿಸಿದಾಗ ಅದೊಬ್ಬನನ್ನು ಕೊಲ್ಲಬಹುದು ಅಥವಾ ಕೊಲ್ಲದಿರಬಹುದು. ಆದರೆ ವಿದ್ಯಾವಂತನು ಬಳಸುವ ಬುದ್ಧಿ ಒಂದು ರಾಜ್ಯವನ್ನೂ ರಾಜನನ್ನೂ ಹಾಳುಗೆಡವಬಲ್ಲದು.'

**ವಿದ್ಯಾಮದೋ ಧನಮದಸ್ತೃತೀಯೋ ಽಭಿಜನೋ ಮದಃ।**

**ಏತೇ ಮದಾವಲಿಪ್ತಾನಾಮೇತ ಏವ ಸತಾಂ ದಮಾಃ** ॥(ಅ.34 ಶ್ಲೋ.42)

'ಅಹಂಕಾರಿಗಳಿಗೆ ಈ ಮೂರರಿಂದ ಅಹಂಕಾರ ಬರುತ್ತದೆ – ವಿದ್ಯೆ, ಧನ ಮತ್ತು ಕುಲ. ಇವೇ ಸಜ್ಜನರಿಗೆ ಇಂದ್ರಿಯನಿಗ್ರಹಕ್ಕೆ ಕಾರಣಗಳಾಗುತ್ತವೆ.'

**ವಿದ್ಯಾಶೀಲವಯೋವೃದ್ಧಾನ್ಬುದ್ಧಿವೃದ್ಧಾಂಶ್ಚ ಭಾರತ ।**

**ಧನಾಭಿಜನವೃದ್ಧಾಂಶ್ಚ ನಿತ್ಯಂ ಮೂಢೋಽವಮನ್ಯತೇ**॥(ಅ.38 ಶ್ಲೋ.31)

'ವಿದ್ಯಾವೃದ್ಧರು, ವಯೋವೃದ್ಧರು, ಉತ್ತಮನಡತೆಯವರು, ಬಹಳ ಅನುಭವಿಗಳು, ಧನಸಂಪನ್ನರು ಹಾಗೂ ಉನ್ನತಕುಲದವರು – ಇವರನ್ನು ಮೂರ್ಖನು ಯಾವಾಗಲೂ ಅವಮಾನಿಸುತ್ತಾನೆ (ಇವರನ್ನು ಅವಮಾನಿಸುವವನು ಮೂರ್ಖ).'

ವಿದ್ಯೆಯ ಮಹತ್ತ್ವ:–

**ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ ।**

**ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್** ॥(ಅ.35 ಶ್ಲೋ.64)

'ಪರಾಕ್ರಮಶಾಲೀ, ವಿದ್ಯಾವಂತ ಮತ್ತು ಮೇಲಿನವರಿಗೆ ಚೆನ್ನಾಗಿ ಸಹಾಯ ಮಾಡುವವನು – ಈ ಮೂವರು ಬಂಗಾರದ ಹೂವಿನ ಭೂಮಿಯನ್ನು ಆಯ್ದುಕೊಳ್ಳುತ್ತಾರೆ. (ಜೀವನದಲ್ಲಿ ಬಹಳಸಂಪತ್ತನ್ನು ಗಳಿಸುತ್ತಾರೆ.)'

ಗುರುಗಳು:–

**ಪಂಚಾಗ್ನಯೋ ಮನುಷ್ಯೇಣ ಪರಿಚರ್ಯಾಃ ಪ್ರಯತ್ನತಃ ।**

**ಪಿತಾ ಮಾತಾಗ್ನಿರಾತ್ಮಾ ಚ ಗುರುಶ್ಚ ಭರತರ್ಷಭ** ॥(ಅ.33 ಶ್ಲೋ.62)

'(ಅಗ್ನಿಯ ಉಪಾಸನೆ ಆವಶ್ಯಕವಷ್ಟೆ.) ತಂದೆ, ತಾಯಿ, ಅಗ್ನಿದೇವತೆ, ಪರಮಾತ್ಮಾ ಮತ್ತು ಗುರುಗಳು – ಈ ಐವರೂ ಅಗ್ನಿಗಳು. ಇವರನ್ನು ಗಮನವಿಟ್ಟು ಸೇವಿಸಬೇಕು.'

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ.



**ಬುದ್ಧ್ಯಾ ಭಯಂ ಪ್ರಣುದತಿ ತಪಸಾ ವಿಂದತೇ ಮಹತ್ ।**

**ಗುರುಶುಶ್ರೂಷಯಾ ಜ್ಞಾನಂ ಶಾಂತಿಂ ತ್ಯಾಗೇನ ವಿಂದತಿ ॥**

(ಅ.36 ಶ್ಲೋ.50)

'ಮನುಷ್ಯ ಬುದ್ಧಿಯಿಂದ ಭಯವನ್ನು ಕಳೆದುಕೊಳ್ಳುತ್ತಾನೆ. ನಿರಂತರ ಆಲೋಚನೆಯಿಂದ ದೊಡ್ಡದನ್ನು ಸಾಧಿಸುತ್ತಾನೆ. ಗುರುಸೇವೆಯಿಂದ ಜ್ಞಾನವನ್ನು ಪಡೆಯುತ್ತಾನೆ. ತನ್ನದನ್ನು ಅಗತ್ಯವಿರುವ ಇನ್ನೊಬ್ಬರಿಗೆ ಹಂಚುವುದರಿಂದ ಶಾಂತಿಯನ್ನು ಪಡೆಯುತ್ತಾನೆ.'

ವಿದ್ಯೆಯ ರಕ್ಷಣೆ:–

**ಸತ್ಯೇನ ರಕ್ಷ್ಯತೇ ಧರ್ಮೋ ವಿದ್ಯಾ ಯೋಗೇನ ರಕ್ಷ್ಯತೇ ।**

**ಮೃಜಯಾ ರಕ್ಷ್ಯತೇ ರೂಪಂ ಕುಲಂ ವೃತ್ತೇನ ರಕ್ಷ್ಯತೇ** ॥(ಅ.34 ಶ್ಲೋ.37)

'ಸತ್ಯದಿಂದ ಧರ್ಮ, ನಿಯಮಬದ್ಧತೆಯಂತಹ ಯೋಗದಿಂದ ವಿದ್ಯೆ, ತಿಕ್ಕಿ ತೊಳೆಯುವುದರಿಂದ ರೂಪ ಮತ್ತು ನಡತೆಯಿಂದ ಕುಲವು ರಕ್ಷಿತವಾಗುತ್ತದೆ.'

ವಿದ್ಯಾವಿರೋಧಿಗಳು

**ಅಶುಶ್ರೂಷಾ ತ್ವರಾ ಶ್ಲಾಘಾ ವಿದ್ಯಾಯಾಃ ಶತ್ರವಸ್ತ್ರಯಃ** ।(ಅ.40 ಶ್ಲೋ.4)

'ಗುರುಗಳನ್ನು ಸೇವಿಸದಿರುವುದು, ಗಡಿಬಿಡಿ ಮತ್ತು ಹೊಗಳಿಕೆ – ಈ ಮೂರು ವಿದ್ಯೆಯ ಶತ್ರುಗಳು.'

**ಸುಖಾರ್ಥಿನಃ ಕುತೋ ವಿದ್ಯಾ ನಾಸ್ತಿ ವಿದ್ಯಾರ್ಥಿನಃ ಸುಖಮ್ ।**

**ಸುಖಾರ್ಥೀ ವಾ ತ್ಯಜೇದ್ವಿದ್ಯಾಂ ವಿದ್ಯಾರ್ಥೀ ವಾ ಸುಖಂ ತ್ಯಜೇತ್** ॥(ಅ.40 ಶ್ಲೋ.5)

'ಸುಖ ಬೇಕೆನ್ನುವವನಿಗೆ ವಿದ್ಯೆ, ವಿದ್ಯೆ ಬೇಕೆನ್ನುವವನಿಗೆ ಸುಖ ಎಲ್ಲಿಂದ ಬರಬೇಕು? ಸುಖಾಪೇಕ್ಷೆಯಿದ್ದರೆ ವಿದ್ಯೆಯನ್ನು ಬಿಡಬೇಕು. ವಿದ್ಯಾಪೇಕ್ಷೆ ಇದ್ದರೆ ಸುಖವನ್ನಾದರೂ ಬಿಡಬೇಕು.'

ಇಲ್ಲಿರುವ ಒಂದೊಂದು ಮಾತೂ ನಮ್ಮ ಪ್ರಾಚೀನರ ಅಪಾರ ಅನುಭವಕ್ಕೆ, ಆಳವಾದ ಚಿಂತನಶಕ್ತಿಗೆ ಹಾಗೂ ಕಳಕಳಿಗೆ ಸಾಕ್ಷಿಯಾಗಿವೆ. ಒಂದೊಂದು ಮಾತಿಗೂ ಉದಾಹರಣೆಗಳು ನಮ್ಮ ಸುತ್ತಮುತ್ತ ಬೇಕಾದಷ್ಟು ಕಂಡುಬರುತ್ತವೆ. ಪ್ರತ್ಯುದಾಹರಣೆಗಳೂ ನೋಡಲು ಸಿಗುತ್ತವೆ. ಒಂದೊಂದು ಮಾತು ವಿವಿಧ ನೀತಿಕಥೆಗಳ ಸೂಚಕ. ಈ ಮುಂದಿನ ಕೆಲಸವೆಲ್ಲ ಓದುಗರಿಗೇ ಸೇರಿದ್ದು!

*********************

ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.

ಭಾಗ–1

# ಜೀವನ ಯಜ್ಞ

**ಸಂಕಲನ: ಸುನಂದಕೀ**

"ಸಾಮಾನ್ಯ ಲೌಖಿಕ ವ್ಯವಹಾರವನ್ನೂ ಅಸಾಮಾನ್ಯ ಅಲೌಖಿಕ ಸಾಧನೆಯನ್ನಾಗಿಸಿದ ಹೆಗ್ಗಳಿಕೆ ಪ್ರಾಚೀನ ಭಾರತೀಯ ಚಿಂತಕರದ್ದು". ಇದು ಪಾಶ್ಚಾತ್ಯ ತತ್ವಜ್ಞಾನಿಗಳ ಮಾತು. ಅಂತಹ ಪ್ರಾಚೀನ ಭಾರತೀಯ ಚಿಂತಕರ ಪಂಕ್ತಿಯಲ್ಲಿ ಅಗ್ರಗಣ್ಯರೆನಿಸಿದವರು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು. ಅವರು ಶ್ರವಣ–ಮನನ–ಧ್ಯಾನಾದಿಗಳ ಸಿದ್ಧಿಯನ್ನು ಪಡೆದ ಜ್ಞಾನಿಯಲ್ಲಿರಬೇಕಾದ ಹಾಗೂ ಇರುವ ಲಕ್ಷಣವನ್ನು ಎಚ್ಚರಿಸುವ ಜೊತೆಯಲ್ಲಿ ಸಾಮಾನ್ಯ ಸಾಧಕನಿಗೆ ಇರಬೇಕಾದ ಸಾಧನಮಾರ್ಗವನ್ನು ಅನೇಕ ಮುಖದಿಂದ ಸೂಚಿಸಿರುವರು. ಆ ಸಾಧನದಲ್ಲಿ ಪ್ರಧಾನವಾದುದು ಜೀವನು ನಡೆಸುವ ಜೀವನದಲ್ಲಿ ಯಜ್ಞ ಚಿಂತನೆ.

ಯಜ್ಞವೆಂದರೆ ಭಗವಂತನ ಅಥವಾ ಅವನಿಗಾಗಿ ಮಾಡುವ ತ್ಯಾಗ ಪೂರ್ವಕವಾದ ಸೇವೆ. ಪರಮಾತ್ಮನ ಉದ್ದೇಶದಿಂದ ಮಾಡುವ ಕರ್ಮವು ಬಂಧಕವಾಗಲಾರದು. ಸ್ವಾರ್ಥದ ಉದ್ಧೇಶದಿಂದ ನಡೆಸುವ ಕಾರ್ಯಗಳೇ ಸಂಸಾರದಲ್ಲಿ ನಮ್ಮನ್ನು ಬಿಗಿಯುವ ಶೃಂಖಲೆಗಳಾಗಬಲ್ಲವು. ಭಗವಂತನ ಪೂಜಾರೂಪವಾಗಿ ನಾವು ಕರ್ಮಗಳನ್ನು ಮಾಡ ಹೊರಟರೆ ಅವುಗಳೇ ನಮ್ಮ ಆತ್ಮ ಸೌಂದರ್ಯವನ್ನು ಬೆಳಗಿಸುವ ಪುಷ್ಪಹಾರ ಆಭರಣಗಳಾಗುವುವು.

ತ್ಯಾಗ ಮತ್ತು ಸೇವೆ ಇವೆರಡು ಯಜ್ಞದಲ್ಲಿ ಅಡಕವಾದ ಅಂಶಗಳು. ಭಗವತ್ಸೇವಾ ದೃಷ್ಟಿಯಿಂದ ನಮ್ಮಲ್ಲಿರುವ ವಸ್ತುವಿನ ತ್ಯಾಗದೊಂದಿಗೆ ನಡೆಸುವ ಕ್ರಿಯೆಯೇ ಯಜ್ಞವಾಗುವುದು. ಕೇವಲ ಅಗ್ನಿಯಲ್ಲಿ ಮಾಡುವ ಹೋಮವೇ "ಯಜ್ಞ" ಎಂಬ ಪರಿಮಿತ ಅರ್ಥದಲ್ಲಿ ಈ ಯಜ್ಞ ಶಬ್ದವನ್ನು ಇಲ್ಲಿ ಬಳಸಲಾಗಿಲ್ಲ. ಯಜ್ಞ ಶಬ್ದದ ಅರ್ಥದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಭಗವತ್ಪ್ರೀತಿಯಾಗಲಿ ಎಂಬ ಉದ್ದೇಶದಿಂದ ಅವನ ಪೂಜಾ ರೂಪವಾಗಿ ಫಲದ ಆಸಕ್ತಿಯಿಲ್ಲದೇ ಮಾಡುವ ಸತ್ಕಾರ್ಯಗಳೆಲ್ಲವೂ ಯಜ್ಞಗಳಾಗುವುವು.

ತ್ಯಾಗ–ಸೇವೆಗಳ ಸಮನ್ವಯರೂಪವಾದ ಯಜ್ಞ ದೃಷ್ಟಿಯಿಂದ ಈ ಕರ್ತವ್ಯಗಳನ್ನು ಮಾನವರು ಅವಶ್ಯವಾಗಿ ಆಚರಿಸಲೇಬೇಕೆಂದು ಗೀತಾಚಾರ್ಯನ ಆದೇಶ. ಕೃತಜ್ಞತಾ

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**



ದೃಷ್ಟಿಯ ಸಂಕೇತವಾಗಿಯೂ ಜಗಚ್ಚಕ್ರದ ಪ್ರವರ್ತನೆಯ ಉದ್ದೇಶದಿಂದಲೂ ಈ ಕರ್ತವ್ಯವನ್ನು ಜಗತ್ತಿನಲ್ಲಿ ಜನಿಸಿದ ಜನರು ಅವಶ್ಯವಾಗಿ ಆಚರಿಸಲೇಬೇಕಾಗಿರುವುದು. ನಾವು ಪ್ರತಿಕ್ಷಣದಲ್ಲಿ ಪರಮಾತ್ಮನಿಂದ ಹಾಗೂ ದೇವತೆಗಳಿಂದಲೂ ಉಪಕೃತರಾಗಿದ್ದೇವೆ. ಭೂಮಿ, ನೀರು, ತೇಜಸ್ಸು, ಗಾಳಿ, ಆಕಾಶ ಮುಂತಾದ ಭಗವಂತನು ಒದಗಿಸಿದ ವಸ್ತುಗಳನ್ನು ನಾವು ಅವಲಂಬಿಸಿಕೊಂಡಿದ್ದೇವೆ. ಈ ಸೃಷ್ಟಿಯ ಅಭಿಮಾನಿ ಹಾಗೂ ಅಂತರ್ಯಾಮಿ ದೇವತೆಗಳನ್ನು ಆಧರಿಸಿಯೇ ನಮ್ಮ ಆಹಾರ, ವಿಹಾರ, ವ್ಯವಹಾರ ಮೊದಲಾದ ಎಲ್ಲ ಪ್ರವೃತ್ತಿಗಳು ನಡೆದಿವೆ, ನಡೆಯುತ್ತಿವೆ. ಹೀಗೆಯೇ ಜಗನ್ನಿಯಾಮಕವಾದ ಆ ಪರಾತ್ಪರ ಶಕ್ತಿಯಿಂದ ಪ್ರತಿಕ್ಷಣವೂ ಪ್ರಯೋಜನವನ್ನು ಪಡೆಯುತ್ತಿರುವಾಗ ಅವನ ಪ್ರೀತಿಗಾಗಿ, ಅವನ ಸೇವಾ ರೂಪವಾಗಿ ಮಾಡಬೇಕಾದ ಕರ್ತವ್ಯಗಳು ನಮಗಿವೆ ಎಂಬುದನ್ನು ನಾವು ಅರಿತುಕೊಳ್ಳಬೇಕು.

ಅಂತೆಯೇ ನಾವು ಮಾಡುವ ಸತ್ಕರ್ಮಗಳಿಂದ ಜಗತ್ತಿನ ಮೇಲೆ ಎರಡು ವಿಧದ ಪರಿಣಾಮವಾಗುವುದೆಂದು ನಾವು ಭಾವಿಸಬಹುದು–ಒಪ್ಪಬಹುದು. ಒಂದು ಪ್ರಾಕೃತಿಕವಾದರೆ ಇನ್ನೊಂದು ಸಾಮಾಜಿಕ. ಶ್ರೀಹರಿಯ ಉದ್ದೇಶದಿಂದ ನಾವು ಮಾಡುವ ಯಜ್ಞರೂಪವಾದ ಸತ್ಕರ್ಮದಿಂದ ದೈವೀ ಶಕ್ತಿಯು ಜಾಗೃತವಾಗಿ ನೀತಿ, ಶೀಲ, ಸದ್ಗುಣಗಳು ಬೆಳೆದು ಅನೀತಿ, ಭ್ರಷ್ಟಾಚಾರಗಳಿಗೆ ಅವಕಾಶವಿಲ್ಲವೆಂದಾದರೆ ಜಗತ್ತು ಸಹಜವಾಗಿಯೇ ಸಮೃದ್ಧಿಯೆಡೆಗೆ ಸಾಗುವುದು. ಇದು ಈ ಯಜ್ಞದಿಂದಾಗುವ ಸಾಮಾಜಿಕ ಪರಿಣಾಮ. ಸಕಾಲದಲ್ಲಿ ಮಳೆ, ಬೆಳೆಗಳು ಬಂದು ಯಾವುದೇ ಭೌತಿಕ ಉಪದ್ರವಗಳಿಲ್ಲದೆ ಲೋಕದಲ್ಲಿ ಸುಭಿಕ್ಷೆಯು ಆಗುವುದು. ಇದು ಈ ಯಜ್ಞದಿಂದಾಗುವ ಪ್ರಾಕೃತಿಕ ಪರಿಣಾಮ.

ಇಂದು ಯಜ್ಞ ದೃಷ್ಟಿಯಿಲ್ಲದೆ ಸ್ವಾರ್ಥ ಪ್ರವೃತ್ತಿಯೇ ನಮ್ಮಲ್ಲಿ ನೆಲೆಸಿರುವುದರಿಂದ ಇವೆರಡು ಸತ್ಪರಿಣಾಮಗಳಿಗೆ ನಾವು ಎರವಾಗಿದ್ದೇವೆ. ದೇವತೆಗಳಿಗೆ ಸತ್ಕರ್ಮಗಳನ್ನು ಅರ್ಪಿಸದೇ ಅವರಿಗೆ ಆಹಾರ ಸಮಸ್ಯೆಯನ್ನು ನಾವು ನಿರ್ಮಿಸಿರುವುದರಿಂದ ನಮಗೆ ಆಹಾರ ಸಮಸ್ಯೆ ಉಂಟಾಗಿದೆ. ವಿಶ್ವ ಚಕ್ರದ ಪ್ರವರ್ತನೆಗಾಗಿ ದುಡಿಯುವುದು ಪ್ರಪಂಚದ ಘಟಕವಾಗಿರುವ ನಮ್ಮ ಅಗತ್ಯ ಕರ್ತವ್ಯವಾಗಿದೆ. ನಮ್ಮ ಸತ್ಕರ್ಮ ಸದ್ವ್ಯವಹಾರಗಳಿಂದ ಪ್ರಾಕೃತಿಕವಾಗಿಯೂ ಸಾಮಾಜಿಕವಾಗಿಯೂ ಉತ್ತಮ ವಾತಾವರಣವು ನೆಲಸುವಂತೆ ಪ್ರಯತ್ನಿಸಿ ಜಗಚ್ಚಕ್ರದ ಅಬಾಧಿತವಾದ ಮುನ್ನಡೆಗೆ ನಾವು ಸಹಕಾರಿಗಳಾಗಿ ಸೃಷ್ಟಿಕರ್ತನ ಸೇವೆಯನ್ನು ಸಲ್ಲಿಸಬೇಕು.

**ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.**

"ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ"–ಎಂದು ಭಗವಂತನು ಈ ವಿಶ್ವ ಚಕ್ರದ ಪ್ರವರ್ತನೆಯ ಕಾರ್ಯದಲ್ಲಿ ಸಹಕಾರಿಯಾಗದೆ ತನ್ನ ಬೌತಿಕ ಸುಖದಲ್ಲಿಯೇ ಲೋಲುಪನಾದವನ ಜೀವನವು ವ್ಯರ್ಥವೆಂದು ನಿಂದಿಸಿರುವನು. ಈ ದಿಸೆಯಲ್ಲಿ ಯಜ್ಞದೃಷ್ಟಿಯನ್ನು ಉಪಯೋಗಿಸಿಕೊಂಡು ಐಹಿಕ, ಅಮುಷ್ಮಿಕ, ವೈಯಕ್ತಿಕ, ಸಾಮಾಜಿಕ ಸುಖ–ಹಿತಗಳನ್ನು ಪಡೆಯಿರಿ ಎಂದು ಭಗವಂತನು ನಮ್ಮನ್ನು ಈ ಭೂಮಿಗೆ ಕಳುಹಿಸಿರುವನು.

ಪರಮಾತ್ಮನು ಸಜ್ಜೀವರ ಆತ್ಮವಿಕಾಸಕ್ಕಾಗಿಯೇ ಈ ಸೃಷ್ಟಿಯನ್ನು ಏರ್ಪಡಿಸಿರುವನು. ಜೀವನು ತನ್ನ ಸ್ವತ್ತಾದ–ಸುಪ್ತವಾದ ಸುಂದರ ವ್ಯಕ್ತಿತ್ವವನ್ನು ಪಡೆಯಲಿ ಎಂಬ ಅಭಿಪ್ರಾಯದಿಂದಲೇ ಈ ಜಗತ್ತನ್ನು ಪರಮಾತ್ಮನು ನಿರ್ಮಿಸಿರುವನು. ಅದಕ್ಕಾಗಿಯೇ ಈ ಯಜ್ಞದೃಷ್ಟಿಯೆಂಬ ಪವಿತ್ರ ಸಾಧನವನ್ನು ನಮಗೆ ನೀಡಿರುವನು. ಈ ಸೃಷ್ಟಿಯ ಉದ್ದೇಶವನ್ನು, ಜೀವ ವಿಕಾಸದ ಬಗ್ಗೆ ಭಗವಂತನಿಗೆ ಇರುವ ಈ ಸಂಕಲ್ಪವನ್ನು ನಾವು ಅರಿತುಕೊಂಡು ಅವನ ಉದ್ದೇಶಕ್ಕನುಗುಣವಾಗಿ ಈ ವಿಶ್ವ–ಜೀವ ವಿಕಾಸದ ಕಾರ್ಯದಲ್ಲಿ ನಾವು ಪಾಲುಗಾರರಾಗಬೇಕು. ಈ ಹೊಣೆಗಾರಿಕೆಯನ್ನು ತಿಳಿದುಕೊಳ್ಳದೇ ಸ್ವಾರ್ಥಮಾತ್ರ ಪರಾಯಣರಾಗಿ ಈ ಯಜ್ಞರೂಪವಾದ ಕರ್ತವ್ಯವನ್ನು ನಿರ್ವಹಿಸದೇ ನಾವು ದೂರ ಸರಿದರೆ ಅದು ದೇವವಿರೋಧಿಯ ವಿಶ್ವವಿಘಾತಕವೂ ಆದ ಪ್ರವೃತ್ತಿಯೆನಿಸುವುದು. ಪರಮಾತ್ಮನಿಂದ ಉಪಕಾರವನ್ನು ಪಡೆದು ಅವನ ವಿಶ್ವಕಾರ್ಯದಲ್ಲಿ ನಾವು ಭಾಗವಹಿಸದೇ ಇರುವುದು ಅಕ್ಷಮ್ಯ ಅಪರಾಧವು ಆಗುವುದು. ಆದ್ದರಿಂದ ಯಜ್ಞರೂಪವಾದ ಕರ್ತವ್ಯವು ಬಂಧಕವಲ್ಲವೆನ್ನುವುದರ ಜೊತೆಗೆ ಕೃತಜ್ಞತಾ ಭಾವದಿಂದಲೂ ಲೋಕದ ಪ್ರಾಕೃತಿಕ, ಸಾಮಾಜಿಕ ವ್ಯವಸ್ಥೆಯ ರಕ್ಷಣೆಯ ದೃಷ್ಟಿಯಿಂದಲೂ ಇಂತಹ ಕರ್ತವ್ಯವನ್ನು ಆಚರಿಸುವುದು ಅತ್ಯಂತ ಆವಶ್ಯಕವೂ, ಅನಿವಾರ್ಯವೂ ಆಗಿದೆ ಎಂದು ಮನಗಾಣಬೇಕು. ಮನು ಕುಲದಲ್ಲಿ ಜನಿಸಿದ ಪ್ರತಿಯೊಬ್ಬನು ಕರ್ಮವು ಬಂಧಕವೆಂದು ಹೆದರಿ ಕುಳಿತುಕೊಳ್ಳದೆ ಯಜ್ಞರೂಪವಾಗಿ ಭಗವತ್ಸೇವಾದೃಷ್ಟಿಯಿಂದ ಕರ್ತವ್ಯಗಳನ್ನು ಆಚರಿಸಲೇಬೇಕೆಂದು ಸಮಸ್ತ ಶಾಸ್ತ್ರಗಳ ಉದ್ದೇಶವೂ ಆಗಿದೆ.

ಆದ್ದರಿಂದ ಕರ್ತವ್ಯಮಯವಾದ ಜೀವನವು ಸಾರ್ಥಕವಾಗಲು ಯಜ್ಞ ಚಿಂತನೆಯ ಮಾರ್ಗದ ಅನ್ವೇಷಣೆಯ ದಿಕ್ಸೂಚಿ ಇಂತಿದೆ.

(ಸಶೇಷ)

ಹಸಿದವರಿಗೆ ಅನ್ನವನ್ನು ನೀಡಿ.



# ಯೋಗದೀಪಿಕಾ ಗುರುಕುಲದ 19ನೇ ಘಟಿಕೋತ್ಸವ

ಸಂಗ್ರಹ: ಸಗ್ರಿ

ಪಲಿಮಾರಿನ ಯೋಗದೀಪಿಕಾ ಗುರುಕುಲದ 19ನೆಯ ಘಟಿಕೋತ್ಸವ 18–05–2008ರಂದು ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅಧ್ಯಕ್ಷತೆಯಲ್ಲಿ ನಡೆಯಿತು. ಐದು ವಿದ್ಯಾರ್ಥಿಗಳು ಯೋಗದೀಪಿಕಾದಲ್ಲಿ ಆರು ವರ್ಷ ಅವಧಿಯ ವಿದ್ಯಾಭ್ಯಾಸವನ್ನು ಪೂರೈಸಿ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು. ಇವರಲ್ಲಿ ಟಿ.ಎಸ್. ಜನಾರ್ದನಾಚಾರ್ಯ ಬ್ರಹ್ಮಸೂತ್ರಭಾಷ್ಯದ ಬಗ್ಗೆ, ಕೆ. ಮಾಧವ ಭಟ್ ಶ್ರೀಮಧ್ವವಿಜಯದ ಬಗ್ಗೆ, ಟಿ.ಎಸ್. ಮನೋಹರ ಭಟ್ಟ ಹಾಗೂ ಶ್ರೀಪ್ರಸಾದ ಉಪಾಧ್ಯಾಯ ಮಹಾಭಾರತ ತಾತ್ಪರ್ಯನಿರ್ಣಯದ ಬಗ್ಗೆ, ಎ. ರಾಘವೇಂದ್ರ ಭಟ್ ತಂತ್ರಸಾರಸಂಗ್ರಹದ ಬಗ್ಗೆ ಶಾಸ್ತ್ರಾನುವಾದ ನಡೆಸಿ ತಮ್ಮ ಅಧ್ಯಯನವನ್ನು ಶ್ರೀವೇದವ್ಯಾಸರಲ್ಲಿ ಸಮರ್ಪಿಸಿದರು. ಬೆಂಗಳೂರಿನ ಶ್ರೀಪೂರ್ಣಪ್ರಜ್ಞ ಸಂಶೋಧನಾ ಮಂದಿರದ ನಿರ್ದೇಶಕರಾಗಿರುವ ವಿದ್ವಾನ್ ಆನಂದತೀರ್ಥ ನಾಗಸಂಪಿಗೆಯವರು ತಮ್ಮ ಘಟಿಕೋತ್ಸವ ಉಪನ್ಯಾಸದಲ್ಲಿ ಪೌರೋಹಿತ್ಯದ ವ್ಯಾಪ್ತಿಯನ್ನು ಪ್ರತಿಪಾದಿಸಿದರು. ಜೋತಿಷ್ಯ ವಿದ್ವಾನ್ ಬೈಲೂರು ಪದ್ಮನಾಭತಂತ್ರಿಗಳಿಗೆ **ಶ್ರೀ ರಾಜರಾಜೇಶ್ವರತೀರ್ಥ ಪ್ರಶಸ್ತಿ**ಯನ್ನು ನೀಡಿ ಗೌರವಿಸಲಾಯಿತು. ಪೇಜಾವರ ಮಠದ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥರು ವಿದ್ಯಾರ್ಥಿಗಳಿಗೆ ಇರಬೇಕಾದ ವಿನಯದ ಬಗ್ಗೆ ದೃಷ್ಟಾಂತಪೂರ್ವಕವಾಗಿ ಅಶೀರ್ವಚನವನ್ನಿತ್ತರು. ಯೋಗದೀಪಿಕಾದ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ತಮ್ಮ "ಅನುಶಾಸನ" ಉಪನ್ಯಾಸದಲ್ಲಿ ಪೌರೋಹಿತ್ಯ, ಜ್ಯೋತಿಷ್ಯಗಳಿಗೆ ಸಂಬಂಧಿಸಿದ ಜೀವನ ಮತ್ತು ಸಾಧನೆಗಳ ಕುರಿತು ವಿವೇಚಿಸಿದರು. ಶ್ರೀ ವಿಶ್ವೇಶತೀರ್ಥರು ತಮ್ಮ ಅಧ್ಯಕ್ಷಭಾಷಣದಲ್ಲಿ ಸಮಾಜದಲ್ಲಿ "ಮೂಲಮಠ" ಬೇರೆ ಎಂದು ವಾದಿಸಿ ಪ್ರಕೃತ ಮಠದ ಕುರಿತಾದ ಶ್ರದ್ಧಾ ಗೌರವವನ್ನು ಕದಲಿಸುವ ಕುತಂತ್ರದ ವಿರುದ್ಧ ಯುವ ಪುರೋಹಿತರು ಎಚ್ಚೆತ್ತುಕೊಳ್ಳಬೇಕೆಂದು ಕರೆ ನೀಡಿದರು. ★

ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

# ಪುಷ್ಪಯಾಗದಿಂದ ಮೆರಗು ಪಡೆದ ಹನುಮಜ್ಜಯಂತಿ

ಸಂಗ್ರಹ: ಸಗ್ರಿ

ಭಕ್ತಿಸಂಗೀತದ ಭಾವುಕತೆಯ ವೈಭವದೊಂದಿಗೆ ಪಲ್ಲಕ್ಕಿಯಲ್ಲಿ ಭಕ್ತಾಂಜನೇಯನನ್ನು ವೇದಿಕೆಗೆ ಹೊತ್ತು ತರಲಾಯಿತು. ಪುಷ್ಪಗಳಿಂದ ಅಲಂಕೃತವಾಗಿದ್ದ ವೇದಿಕೆಯಲ್ಲಿ ದಾಸಸಾಹಿತ್ಯದ ಮಂತ್ರಪಠಣದೊಂದಿಗೆ ಪಂಚಾಮೃತಾಭಿಷೇಕಾದಿಗಳೂ ನಡೆದವು. ಬಳಿಕ “ಪುಷ್ಪಯಾಗ”. ಮಲ್ಲಿಗೆ, ಸೇವಂತಿಗೆ, ಕಮಲ, ಇತ್ಯಾದಿ ಬಗೆ ಬಗೆಯ ಪುಷ್ಪಗಳ ಸಮರ್ಪಣೆ. ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀ ಶ್ರೀ ವಿದ್ಯಾಪ್ರಸನ್ನ ತೀಥ ಶ್ರೀಪಾದರು ಭಕ್ತಿಯಿಂದ ಎಲ್ಲ ಭಾವುಕರ ಪರವಾಗಿ ಪುಷ್ಪಗಳನ್ನು ಸಮರ್ಪಿಸುತ್ತಿದ್ದರು. ದಶೋಪನಿಷತ್ತುಗಳಲ್ಲಿ ಪ್ರಸಿದ್ಧಗಳಾದ ವಾಯುದೇವರ 108ನಾಮಗಳನ್ನು “ಶ್ರೀ ಅಗ್ನಯೇ ನಮಃ” “ಶ್ರೀ ಅನಾಯ ನಮಃ”........ ಎಂದು ಸಾಮೂಹಿಕವಾಗಿ ಪಠಿಸಲಾಗುತ್ತಿತ್ತು. ಆ ಮೂಲಕ ಭಗವಂತನ ನೇರ ಪ್ರತಿಬಿಂಬನಾಗಿರುವ ವಾಯುದೇವನ ಪ್ರೇರಕತ್ವವೇ ಮುಂತಾದ ಗುಣಧರ್ಮಗಳ ಅನುಸಂಧಾನದೊಂದಿಗೆ ಅವನ ಉಪನಿಷತ್ ಪ್ರತಿಪಾದ್ಯತ್ವ ಮಹಿಮೆಯನ್ನು ಸಾರಲಾಗುತ್ತಿತ್ತು. ಬಳಿಕ ಶ್ರೀಪಾದರು ಮಂಗಳಾರತಿ ಬೆಳಗಿದರು.

ಶ್ರೀನಿವಾಸನ ಕಲ್ಯಾಣೋತ್ಸವವನ್ನು ಈ ರೀತಿಯಾಗಿ ನಡೆಸಿ ಯಶಸ್ವಿಗಳಾಗಿರುವ ಶ್ರೀ ಅಪ್ಪಣ್ಣಾಚಾರ್ಯರ ನೇತೃತ್ವದಲ್ಲಿ ಇದಂ ಪ್ರಥಮವಾಗಿ ಪಲಿಮಾರಿನ ಘಟಿಕಾಚಲ–ಅಂಜನೇಯನ ಸನ್ನಿಧಾನದಲ್ಲಿ ನಡೆದ ಭಕ್ತಾಂಜನೇಯನ ಪುಷ್ಪಯಾಗ ಭಾವುಕರಲ್ಲಿ ಆಂಜನೇಯನ ಬಗ್ಗೆ ಶ್ರದ್ಧಾಭಕ್ತಿಗಳನ್ನು ಉಕ್ಕಿಸುವಲ್ಲಿ ಯಶಸ್ವಿಯಾಗಿತ್ತು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಸುಬ್ರಹ್ಮಣ್ಯ ಮಠಾಧೀಶ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು “ಸಂಗತಿಕರಣ” ಅರ್ಥದ ಯಜ ಕ್ರಿಯಾಪದದಿಂದ ರೂಪಗೊಂಡ ಯಾಗ ಶಬ್ದ ಬೇರೆ ಬೇರೆ ಭಾವುಕರ ಸಂಗತಿಯನ್ನು, ಜೊತೆಗೂಡುವಿಕೆಯನ್ನು ತಿಳಿಸುವ ಔಚಿತ್ಯದ ಹಿನ್ನಲೆಯಲ್ಲಿ ಪುಷ್ಪಯಾಗದ ಪ್ರಭಾವವನ್ನು ಪ್ರತಿಪಾದಿಸಿದರು. ಮುಖ್ಯ ಉಪನ್ಯಾಸಕರಾಗಿದ್ದ ಡಾ॥ ಪ್ರಭಂಜನಾಚಾರ್ಯರು “ವಾಯುಸ್ತುತಿಯ–ವಂದೇಹಂ ತಂ......” ಎಂಬ ಶ್ಲೋಕಾರೂಢವಾಗಿ ಆಂಜನೇಯನ ಗುಣಮಹಿಮೆಯನ್ನು ಸಾರಿದರು. ಶ್ರೀ ವಿದ್ಯಾಧೀಶತೀರ್ಥರು ಬಾಯಿಯ ಎದುರು ಬಲಗೈ ಹಿಡಿದು ಬಾಗಿ ನಿಂತಿರುವ ಭಂಗಿಯ ಆಂಜನೇಯನ ಪ್ರತೀಕದ ಮೂಲಕ ಮಾತಿನ ಮಿತಬಳಕೆಯ ಬಗ್ಗೆ ಆಂಜನೇಯನಿಂದ ಹೊಮ್ಮಿರುವ ಸಂದೇಶದ ಬಗ್ಗೆ ವಿವರಿಸಿದರು. (ಪುಟ38ನ್ನು ನೋಡಿ)

**ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ.**



# ಮಹಾವಿಷ್ಣುವಿನ ಪ್ರತಿಷ್ಠೆಯಿಂದ ಪುನಃ ವಿಜೃಂಭಿಸಿದ “ಏಕವಾಟ”

ಸಂಗ್ರಹ: ಸಗ್ರಿ

ಶ್ರೀ ಮಧ್ವಗುರುಗಳ ವಾದ(ತತ್ವೋದ್ಯೋತ)ಗ್ರಂಥದ ನಿರ್ಮಾಣದ ತಾಣವಾಗಿ, ಚಾತುರ್ಮಾಸ್ಯ ವ್ರತಾಚರಣೆಗೆ ಆಸರೆಯಾಗಿ, ಕಣ್ವತೀರ್ಥದ ಪಕ್ಕದ ಸಮುದ್ರದಲ್ಲಿ ಗ್ರಹಣ ಸ್ನಾನ ನಡೆಸಲು ಹೋದ ಭಾವುಕರ ಗ್ರಾಮವಾಗಿ– ಹೀಗೆ ಮಧ್ವವಿಜಯದಲ್ಲಿ ಶ್ರೀ ಮಧ್ವ ಗುರುಗಳ ಸಂಪರ್ಕಕ್ಕೊಳಗಾದ ಮೂರು ಪ್ರಸಂಗಗಳ ಉಲ್ಲೇಖದೊಂದಿಗೆ ತುಂಬ ಗೌರಭಾವನೆಯಿಂದ ಪ್ರಸ್ತಾಪಿಸಲ್ಪಟ್ಟಿರುವ “ಏಕವಾಟ” ತನ್ನ ತಾಂತ್ಯಮಠದ ಮಹಾವಿಷ್ಣುವಿನ ಜಲಾಧಿವಾಸದಿಂದಾಗಿ ಕಳೆದುಕೊಂಡಿದ್ದ ವೈಭವನ್ನು ಕಳೆದ ಅಕ್ಷಯತೃತೀಯಾದಂದು(7–05–2008) ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶತೀರ್ಥರ ಮೂಲಕ ನಡೆದ ಮಹಾವಿಷ್ಣುವಿನ ಪ್ರತಿಷ್ಠೆಯಿಂದಾಗಿ ಪುನಃ ಪಡೆದುಕೊಂಡು ವಿಜೃಂಭಿಸಿದಂತಾಗಿದೆ. ಹಿಂದೂ ಸಮಾಜದ ಮುಖಂಡರಾದ ಮಂಗಳೂರಿನ ಎಂ.ಬಿ. ಪುರಾಣಿಕ್, ಕೆ. ಚಂದ್ರಹಾಸ ಆಳ್ವ, ಸೀತಾರಾಂ ಶೆಟ್ಟಿ, ಪ್ರಭಾಕರ ರೈ ಮುಂತಾದ ಊರಿನ ಮುಖಂಡರ ನೇತೃತ್ವದಲ್ಲಿ ಶಿಲಾಮಯವಾಗಿ ರೂಪುಗೊಂಡ ನೂತನ ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮಗಳು ಶಿಬರೂರು ಹಯಗ್ರೀವ ತಂತ್ರಿಗಳು, ಶಿಬರೂರು ವೇದವ್ಯಾಸ ತಂತ್ರಿಗಳ ನೇತೃತ್ವದಲ್ಲಿ ಶ್ರೀಮಧ್ವಗುರುಗಳ ತಂತ್ರಸಾರೋಕ್ತಕ್ರಮದಲ್ಲಿ ನಡೆದ ಪ್ರತಿಷ್ಠಾಪನಾ ಸಮಾರಂಭದ ವೈಭವದ ಬಗ್ಗೆ ಹಾಗೂ ಈಗ ‘ದೇವಂದಪಡ್ಪು’– ಎನಿಸಿರುವ ಮೂಲಕ ಕಳೆದುಕೊಂಡಿದ್ದ ಏಕವಾಟ ತನ್ನ ವ್ಯಕ್ತಿತ್ವವನ್ನು ಪುನಃ ಪಡೆದುಲೊಳ್ಳುವುದರಲ್ಲಿ ಹರಿಗುರುಗಳು ಶ್ರೀ ಶ್ರೀ ವಿದ್ಯಾಧೀಶತೀರ್ಥರ ಮೂಲಕ ತೋರಿದ ಪವಾಡದ, ಚಮತ್ಕಾರದ ಬಗ್ಗೆ ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.

(ಪುಟ37ರಿಂದ ಮುಂದಿವರಿದುದು)

ಹೀಗೆ ಹನುಮಜ್ಜಯಂತಿ ಮೊದಲು ದೊಡ್ಡ ಸಂಖ್ಯೆಯಲ್ಲಿ ಆಚರಿತಗಳಾದ ಪವಮಾನಹೋಮಗಳ ಧಾರ್ಮಿಕತೆಯಿಂದ, ಬಳಿಕ ಪುಷ್ಪಯಾಗದ ಭಾವುಕತೆಯಿಂದ, ತದನಂತರ ಪ್ರವಚನಗಳ ವೈಚಾರಿಕತೆಯಿಂದಲೂ ತುಂಬಿ ತುಳುಕುತ್ತಾ ಧರ್ಮ, ಭಕ್ತಿ, ಜ್ಞಾನಗಳಿಗೆ ಮುಖ್ಯಾಭಿಮಾನಿಯಾದ ಮುಖ್ಯಪ್ರಾಣನ ಹಾಗೂ ಅವನ ಅಂರ್ತಯಾಮಿ ಶ್ರೀರಾಮಚಂದ್ರನ ಪ್ರೀತಿ ವಿಶೇಷಕ್ಕೆ ಪ್ರಯೋಜಕವಾಗಿ ಮೆರೆಯಿತು. ★

**ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ.**

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

1) ಭಗವದ್ಗೀತೆಯಲ್ಲಿರುವ ಅಧ್ಯಾಯಗಳೆಷ್ಟು?

2) ತಸ್ಮಾದ್ಯುದ್ಧ್ಯಸ್ವ ಭಾರತ ಇಲ್ಲಿ ಭಾರತ ಎಂದರೆ ಯಾರು?

3) ರಾಮಾಯಣದಲ್ಲಿ ರಾಮ–ಪರಶುರಾಮರ ಯುದ್ಧದಲ್ಲಿ ಅಸುನೀಗಿದ ಅಸುರ ಯಾರು?

4) ಪಂಚಪಾಂಡವರಲ್ಲಿ ಮೊದಲನೆಯವ ಯಾರು?

5) ಈ ಗಾದೆಯನ್ನು ಪೂರ್ಣಗೊಳಿಸಿ–ಆಕಳು ಕಪ್ಪಾದರೆ.........

6) ನಾನು ಐದಕ್ಷರದ ಹೆಸರು–ಮೊದಲ, ಕೊನೆಯ ಅಕ್ಷರ ಸೇರಿದರೆ ಚಿತ್ತ,
ಮೊದಲೆರಡು ಅಕ್ಷರಗಳು ಸೇರಿದರೆ ಸಿಹಿಯನುಭವ,
ಮೊದಲ 4ನೆಯ ಅಕ್ಷರಗಳು ಸೇರಿದರೆ ದರ್ಪವಾದರೆ ನಾನಾರು?

7) ಹತ್ತು ತಲೆ ಕೆಂಪು, ಆರು ತಲೆ ಕಪ್ಪು, ಏನೆಂದು ಹೇಳಬಲ್ಲಿರಾ?

8) ಜರಾಸಂಧನ ತಂದೆ ಯಾರು?

9) ಶ್ರೀಲಂಕಾದ ಇನ್ನೊಂದು ಹೆಸರೇನು?

10) ಪ್ರಯುತ ಎಂದರೆ ಎಷ್ಟು ಸಂಖ್ಯೆ?

ನಿಮ್ಮ ಅಭಿಪ್ರಾಯಗಳನ್ನು ಈ ವಿಳಾಸಕ್ಕೆ ತಿಳಿಸಿ.

ಕೆ. ವಿ. ಎಸ್. ಎನ್. ಭಟ್,
S/O ಕೆ.ವಿ. ಭಟ್, ನಾಗರಬಾವಿ ಹತ್ತಿರ,
ಅನಂತಶಯನ ರಸ್ತೆ, ಕಾರ್ಕಳ–574 104.

ಪ್ರಾಣಿ ಹಿಂಸೆ ಮಾಡಬೇಡಿ



1) ಈ ಸಂವತ್ಸರ ಎಲ್ಲರನ್ನೂ ಧರಿಸುವುದೇ? (4)

2) ಕುಮರಿಯೊಳಗಣ ಆನೆ (2)

3) ಕೋಗಿಲೆಯನ್ನು ದೇವಭಾಷೆಯಲ್ಲಿ ಕರೆಯೋಣವೇ? (2)

4) ಇನ್ನು ಬೇಡೆನ್ನಲು ಇನ್ನೊಂದರ್ಥದಲ್ಲಿ ಹೇಳೋಣಬ (2)

5) ಮಾದರಿಯ ನಡು ಕಳಚಿದರೆ ದೇವಿಯ ರುದ್ರರೂಪ ತೋರುವುದು (2)

6) ಇದು ಹೋದರೆ ಸಾಧು ಸಾಯುವ (2)

7) ದಯೆಯಲ್ಲೂ ದನದ ಮಗುವೇ (3)

8) ಇದೇನು ಹಳದಿ ಬಟ್ಟೆಯೋ ? ಹಳದಿ ಆಕಾಶವೋ? (4)

15) ಅಯ್ಯೋ ! ಈ ಹಬ್ಬಕ್ಕೆ ಕಾರ್ತಿಕವೇ ಬರಬೇಕೇ? (4)

| | | | | | | | | | |
|---|---|---|---|---|---|---|---|---|---|
| | * | * | 1 | | 9 | | * | | |
| | * | * | | * | | * | * | | |
| | 2 | | * | 3 | | * | 4 | 13 | |
| 6 | | * | 14 | * | * | 12 | * | 5 | |
| | 7 | 10 | | * | 8 | | | | |
| | * | | * | 11 | * | | * | | |
| | * | 15 | | | | * | * | | |

ಮೇಲಿನಿಂದ ಕೆಳಕ್ಕೆ

1) ಸಾಧ್ವಿಗಿರುವ ಇನ್ನೊಂದು ಹೆಸರು (2)

2) ಚಿನ್ನಕ್ಕೆ ಮೂರಕ್ಷರದ ಹೆಸರು (3)

9) ಧರಿಸಿಕೊಂಡಿರುವವ (3)

10) ಹಸಿದವನಿಗೆ ಇದು ಬೇಕಿಲ್ಲ (2)

11) ಕ್ರೋಧವನ್ನು ಎಳೆದು ಹೀಗೆ ಹೇಳಿದರೆ ಹೇಗೆ? (2)

12) ಅಕ್ಕ ತಂಗಿಯರಿಬ್ಬರನ್ನೂ ಒಟ್ಟಿಗೆ ಹೀಗೆ ಕರೆಯೋಣವೇ? (4)

13) ಈ ಬಾಲಕ, ಕೆಟ್ಟ ಮನ್ಮಥನೇ ? (3)

14) ನಾಮ ಹಾಕಲು ಬೇಕಾದ ಅಂಗ (2)

ಇನ್ನೂ ಮುಂದಿನ ಸಂಚಿಕೆಯಲ್ಲಿ....

ನೀಚರನಾಶ್ರಯಿಸಿ ಕೆಡಬೇಡಿ.